ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 26 ಜೂನ್ 28, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಸಿ. ಪಿ. ಐ. [ಎಂ], ಸಿ. ಪಿ. ಐ. ಜಿಲ್ಲಾ ಘಟಕಗಳ ಜಂಟೀ ಕಾರ್ಯಕ್ರಮ

ವಿಧಾನ ಸೌಧ ಪಿಕೆಟಿಂಗ್ 3000 ಜನರ ಬಂಧನ

ಸಿ.ಪಿ.ಐ.(ಎಂ) ಹಾಗೂ ಸಿ.ಪಿ.ಐ.ನ ಬೆಂಗಳೂರು ಜಿಲ್ಲಾ ಘಟಕಗಳ ತೀರ್ಮಾನದಂತೆ ದಿನಾಂಕ 26.6.87ರ ವಿಧಾನ ಸೌಧ ಪಿಕೆಟಿಂಗ್ ಕಾರ್ಯಕ್ರಮ ಯಶಸ್ವಿಯಾಯಿತು. ಮೆರವಣಿಗೆಯಲ್ಲಿ ಸಾಗಿದ ಕಾರ್ಯ ಕರ್ತರನ್ನು ಕೆ.ಆರ್. ಸರ್ಕಲ್‌ನಲ್ಲಿ ತಡೆದು ಬಂಧಿಸಿದರು.

ಬೆಂಗಳೂರಿನ ಚಿಕ್ಕಲಾಲ್ ಬಾಗ್‌ನಿಂದ ಹೊರಟ ಬೃಹತ್ ರ್‍ಯಾಲಿಯಲ್ಲಿ 500 ಜನ ಮಹಿಳೆಯರು ಸುಮಾರು 3000 ಜನರಿದ್ದ ಮೆರವಣಿಗೆ ಬೆಂಗಳೂರಿನ ನಾಗರಿಕರ ಭಾವನೆಗಳಿಗೆ ಪ್ರತಿಸ್ಪಂದಿಸುತ್ತಿತ್ತು.

"ವಿದ್ಯುತ್‌ದರ, ಹಾಲಿನ ದರ, ಹೋಟೆಲ್ ತಿಂಡಿಗಳ ದರ ಇಳಿಸಿ" ಎಂದು ಘೋಷಣೆಗಳನ್ನು ಕೂಗುತ್ತಾ ಸಿ.ಪಿ.ಐ. (ಎಂ), ಸಿ.ಐ.ಟಿ.ಯು; ಸಿ.ಪಿ.ಐ. ಎ.ಐ.ಟಿ.ಯು.ಸಿ. ಹಾಗೂ ರೈತರು, ಯುವ ಜನರು ವಿದ್ಯಾರ್ಥಿಗಳು ಸಾಗಿದ್ದರು. 130 ಕೋಟಿ ರೂಗಳ ಹೊರೆಯನ್ನು ಹೆಗಲ ಮೇಲೆ ಏರಿಸಿದ್ದರಿಂದ ಸಂತಪ್ತರಾಗಿರುವ ಜನಸಾಮಾನ್ಯರ ವಾಣಿಯಾಗಿ ಕರ್ನಾಟಕದ ನಾಲ್ಕು ಕೋಟಿ ಜನರ ಕನ್ನಡ,ತಮಿಳು, ತೆಲುಗು,ಮಲೆಯಾಳಿಗಳೆಲ್ಲರ ಮನಸ್ಸನ್ನು ಪ್ರತಿಬಿಂಬಿಸಿ ಮುನ್ನಡೆಯುತ್ತಿದ್ದರು. ಈ ಜನಕೋಟಿಯ ಮಾತುಗಳನ್ನು ಪ್ರತಿಬಿಂಬಿಸಿದವರು ಇಡೀ ಜನ ಸಮುದಾಯಕ್ಕೆ ಹೋಲಿಸಿದರೆ ಕೇವಲ ಕೆಲವೇ ಜನರಿರಬಹುದು, ಆದರೆ ವಿಶ್ವಬ್ಯಾಂಕ್‌ನ ಮೆಚ್ಚಿಗೆಗಾಗಿ, ಕೇಂದ್ರ ಸರ್ಕಾರದ ತಾರಿಫಿಗಾಗಿ ಕಾತರಿಸಿದ ಇನ್ನೂ ಕಾತರಿಸುತ್ತಿರುವ ಜನತಾ ಸರಕಾರ ಕೇಂದ್ರದ ಕಾಂಗ್ರೈ ಸರಕಾರ ಪ್ರತಿವರ್ಷ ಹೇರಿಸುತ್ತಿರುವ ಹೊರೆಯಿಂದ ಬಳಲಿ ಬೆಂಡಾದ ಜನರ ತಲೆಯ ಮೇಲೆ ಹೇರಿದ ಜನರೆಲ್ಲರನ್ನು ಮುಂದೆ ಒಂದೇ ಸಾಗರವಾಗಿ ಒಳಗೊಳ್ಳುವ ಹೊಣೆಯೂ ಗಿದ್ದರು ಇವರು.

ಮುಖ್ಯಮಂತ್ರಿ ಹೆಗ್ಗಡೆಯವರು ತಮ್ಮ 45 ದಿನಗಳ ಧೀರ್ಘ ವಿದೇಶ ಪ್ರವಾಸದಿಂದ ಹಿಂತಿರುಗಿದ ಮೇಲೆ ವಿದ್ಯುತ್ ದರದ ಬಗ್ಗೆ ಆಡಿರುವ ಮೊದಲ ನುಡಿ ಎಂದರೆ "ವಿದ್ಯುತ್ ದರ ವಿಮರ್ಶಿಸಲಾಗುವುದಿಲ್ಲ" ಅವರು ಬಂದ ನಂತರ ನಡೆದ ಮೊದಲ ಸಂಪುಟ ಸಭೆಯಲ್ಲಿ ಜನರೆಲ್ಲರ ಒಕ್ಕೊರಲಿನ ಈ ಬೇಡಿಕೆಯನ್ನು ಪರಿಗಣಿಸಲಾಗಿಲ್ಲ. ಅದಕ್ಕೆ ಬದಲಾಗಿ ಜನರ ನಡುವೆ ಹೆಚ್ಚುತ್ತಿರುವ ಅಸಂತೃಪ್ತಿಯನ್ನು ಸ್ವಲ್ಪದರಲ್ಲೇ ತೃಪ್ತಿ ಪಡಿಸಲು ಯೋಚನೆ ನಡೆಯುತ್ತಿದೆ ಎಂಬ ಸೂಚನೆ ಮಾತ್ರ ಬಂದಿದೆ.

ಈ ಮಧ್ಯೆ ವಿದ್ಯುತ್ ಮಂತ್ರಿಗಳು ಯಾವ ನಾಚಿಕೆಯೂ ಇಲ್ಲದೆ ವಿಶ್ವಬ್ಯಾಂಕ್ ವಿದ್ಯುತ್ ದರ ಏರಿಕೆಯ ಬಗ್ಗೆ ಮೆಚ್ಚುಗೆ ಸೂಚಿಸಿದೆ ಎಂದಿದ್ದಾರೆ. ಹಾಗೇ ಹಾಲಿನ ದರಗಳ ಏರಿಕೆಯ ಬಗ್ಗೆ ಕೂಡ ಯಾವುದೇ ಮಾತಿಲ್ಲ. ಸರ್ಕಾರದಲ್ಲಿರುವ ಅಧಿಕಾರವನ್ನೂಪಯೋಗಿಸಿ ಹೋಟೆಲ್ ದರಗಳನ್ನು ಇಳಿಸುವ ಮಾತೂ ಇಲ್ಲ. ○

"ರಾಜೀವ್‌ರ ಸರಕಾರವನ್ನು ಎದುರಿಸುವುದು ಅರಮನೆ ಪಿತೂರಿಗಳ ಮೂಲಕವಲ್ಲ"

ಕಮ್ಯೂನಿಸ್ಟರ "ಕರಾಳ ಚರಿತ್ರೆ ಇಂದು ನಿನ್ನೆಯದಲ್ಲ" ಗಾಂಧೀಜಿ "ಭಾರತ ಬಿಟ್ಟು ತೊಲಗಿ" ಎಂದು ಬ್ರಿಟಿಷರಿಗೆ ಕರೆಕೊಟ್ಟಾಗ ಕಮ್ಯೂನಿಸ್ಟರು ನಡೆದುಕೊಂಡ ಬಗೆ ಹೇಗೆ ? "ಇಂದಿರಾ ಕಾಂಗ್ರೆಸ್ಸಿನ ಬಾಲಂಗೋಚಿ ಆಗಿರಲಿಲ್ಲವೇ" "ಆಪತ್ಕಾಲೀನ ಪರಿಸ್ಥಿತಿಯನ್ನು ಸಮರ್ಥಿಸಲಿಲ್ಲವೇ?" "ಸೋವಿಯತ್ ರಷ್ಯಾ ರಾಜೀವ್ ಗಾಂಧಿ ಅವರ ವಿಷಯದಲ್ಲಿ ಮೆತ್ತಗಿರಿ ಎಂದು ಹೇಳಿದರೆ ಇವರು ಮೆತ್ತಗಾಗುತ್ತಾರೆ" ಇತ್ಯಾದಿ ಇತ್ಯಾದಿ ಇದು "ಕನ್ನಡ ಪ್ರಭ"ದ ಸಂಪಾದಕರ ಉವಾಚಗಳು ಒಂದೇ ಸಮನೆ ಗಳಗಳನೆ ಮುತ್ತಿನಂತೆ ಉದುರಿದ್ದಾವೆ. "ಇಂಡಿಯನ್ ಎಕ್ಸ್‌ಪ್ರೆಸ್" ಎಂಬ ಅವರ ಮಾತೃ ಪತ್ರಿಕೆಯ ಸಂಪಾದಕೀಯವನ್ನು ಅನುಸರಿಸುವ ಇವರ ಅಣಿಮುತ್ತುಗಳು ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿದ್ದಾವೆ. ಜಗ್ಗಿದಿದ್ದನ್ನೇ ಮತ್ತೆ ಮತ್ತೆ ಜಗಿಯುವಂತೆ ಮಾಮೂಲಿನ ಆಪಾದನೆ ಸೋವಿಯತ್ ರಷ್ಯದ ಮರ್ಜಿಯಂತೆ ನಡೆಯುತ್ತಾರೆ ಎಂದು ಪುನಃ ಉದುರಿಸಿದ್ದಾವೆ. ಮಾತ್ರವಲ್ಲ. ಬಿಜೆಪಿಯೂ ಇದೇ ಆರೋಪವನ್ನೇ ಮಾಡಿದೆ ಭಾರತದ ರಾಜಕೀಯದಲ್ಲಿ ಕಮ್ಯುನಿಸ್ಟೇತರ ವಿರೋಧ ಪಕ್ಷಗಳ ಕೂಟವನ್ನು ರಚಿಸಿ ತಾನು ಅದರಲ್ಲಿ ದೊಡ್ಡ ಪಾತ್ರವನ್ನು ವಹಿಸಬೇಕೆಂಬ ಮಹದಾಸೆಯುಳ್ಳ, ಬಿಜೆಪಿಗೆ ಇತರ ಎಲ್ಲಾ ಪಕ್ಷಗಳೂ ಕಮ್ಯೂನಿಸ್ಟರ ಜೊತೆ ಸೇರಬೇಕಾದ ಅನಿವಾರ್ಯತೆ ಸಹನವಾಗದಿರುವುದು ಆಶ್ಚರ್ಯವೇನಲ್ಲ.

ಅಮೇರಿಕನ್ ಹಾಗೂ ಇತರ ಸಾಮ್ರಾಜ್ಯಶಾಹಿಗಳ ಜೊತೆಸೇರಿ ಭಾರತವನ್ನು ಅದರ ತಟಸ್ಥ ನೀತಿಯಿಂದ ಹೊರಗೆಳೆಯುವ ತವಕದಲ್ಲಿರುವ ಬಿ.ಜೆ.ಪಿ.ಗೆ ಎಲ್ಲಾದರಲ್ಲೂ ರಷ್ಯಾದ ಕೈಯೇ ಕಾಣಿಸುತ್ತಿದೆ.

ಈಗ ಬಿಜೆಪಿಯ ಮಾತನ್ನು ಇಂಡಿಯನ್ ಎಕ್ಸ್‌ಪ್ರೆಸ್ ಹೇಳುತ್ತಿದೆಯೋ ಇಂಡಿಯನ್ ಎಕ್ಸ್‌ಪ್ರೆಸ್‌ನ ಆಶಯವನ್ನು ಬಿಜೆಪಿ ಪ್ರತಿಧ್ವನಿಸುತ್ತಿದೆಯೋ, ಅಂತೂ ಈ ವಿಷಯದಲ್ಲಿ ಇಬ್ಬರೂ ಜೊತೆಗೂಡಿದ್ದಾರೆ.

ಈ ವಿಷಯದಲ್ಲಿ ಸಿ.ಪಿ.ಐ (ಎಂ) ಖಚಿತ ನಿಲುವು ತಳೆದಿದೆ. ಕಾಂ.ಇ.ಎಂ ಎಸ್.ರವರು ಹೇಳುವಂತೆ ಅಧ್ಯಕ್ಷೀಯ ಚುನಾವಣೆಗೆ ಸಂಬಂಧಿಸಿ ಮೂರು ಧೋರಣೆಗಳು ಸ್ಪಷ್ಟವಾಗಿವೆ. ಒಂದು ಪ್ರಧಾನಿಯ, ಕಾರ್ಯಾಂಗದ ಕೈಗೊಂಬೆಯಾದ ರಾಷ್ಟ್ರಪತಿಯನ್ನು ತರಬೇಕು. ಎಂಬ ಕಾಂಗ್ರೆಸ್ ನಿಲುವು, ಎರಡು ರಾಷ್ಟ್ರಪತಿಗೆ ಸಂವಿಧಾನದಲ್ಲಿರುವ ಅಧಿಕಾರಕ್ಕಿಂತ ಹೆಚ್ಚು ಅಧಿಕಾರವಿದೆ ಎಂಬ [illegible]ನಾಳಶಾಹಿ

(8ನೇ ಪುಟ ನೋಡಿ)

ಎನ್. ಟಿ. ಆರ್. ಗೆ ಇ. ಎಂ. ಎಸ್. ಪತ್ರ

ಎನ್.ಟಿ. ರಾಮರಾವ್‌ರವರಿಗೆ ಅಧ್ಯಕ್ಷರು, ತೆಲುಗು ದೇಶಂ ಪಕ್ಷ.

ಪ್ರೀತಿಯ ಶ್ರೀ ರಾಮರಾವ್,

ನೀವು ಈ ದಿನ ಬಿಡುಗಡೆ ಮಾಡಿದ ಪ್ರತಿಕಾ ಪ್ರಕಟಣೆಯನ್ನು ನೋಡಿದೆ. ಈ ಪ್ರತಿಕಾ ಪ್ರಕಟಣೆ ಇಂದಿನ ಸಭೆಯಲ್ಲಿ ನಾನು ವ್ಯಕ್ತಪಡಿಸಿದ ಸಂಶಯವನ್ನು ನಿಜಮಾಡಿದೆ.

ಹಿಂದಿನ ದಿನದ ಸಭೆಯಲ್ಲಿ 3 ಜನರ ಸಮಿತಿ ಶ್ರೀಕೃಷ್ಣ ಐಯ್ಯರ್‌ರವರೊಬ್ಬರನ್ನೇ ಸ್ಪರ್ಧಿಯೆಂದು ಸಮಿತಿ ಶಿಫಾರಸು ಮಾಡಬೇಕೆಂದು ತೀರ್ಮಾನಿಸಿದುದು ನಿಮಗೆ ನೆನಪಿರಬಹುದು. ನಿಜವಾದ ಸಂಗತಿಯೆಂದರೆ ಸಮಿತಿಯ ಸಭೆಯಲ್ಲಿ ಮೊದಲು ಕೃಷ್ಣ ಐಯ್ಯರ್‌ರವರ ಹೆಸರು ನಂತರ ವರದರಾಜನ್‌ರವರ ಹೆಸರು ಹೀಗೆ ಒಂದು ಹೆಸರುಗಳ ಪಟ್ಟಿಯನೀಡಬೇಕು ಎಂಬ ಸೂಚನೆಬಂದಾಗ ನಾನು ಅದನ್ನು ವಿರೋಧಿಸಿದೆ. ನಂತರ ನೀವು ಶ್ರೀ ಕೃಷ್ಣ ಐಯ್ಯರ್‌ರವರ ಒಬ್ಬರ ಹೆಸರನ್ನು ಇಡಲು ಅಂಗೀಕರಿಸಿದಿರಿ. ಈ ದಿನ ಬೆಳಿಗ್ಗೆ ಸೇರಿ ಅಂಗೀಕರಿಸಿದ 3 ಜನರ ಸಮಿತಿಯ ವರದಿಯಲ್ಲಿ ಇದನ್ನು ನಮೂದಿಸಲಾಯಿತು. ಆದರೆ

[8ನೇ ಪುಟ ನೋಡಿ]

ದಾಂಧಲೆ ಮೂಲಕ

ಜನತೆಯ ತೀರ್ಪನ್ನು ನಿಷ್ಕ್ರೀಯ ಗೊಳಿಸುವ ಪ್ರಯತ್ನ

ಪಶ್ಚಿಮ ಬಂಗಾಳ ಮತ್ತು ಕೇರಳ, ಎರಡೂ ರಾಜ್ಯಗಳಲ್ಲೂ ಕಳೆದ ಕೆಲವು ವಾರಗಳಿಂದ ಬಜೆಟ್ ಅಧಿವೇಶನ ನಡೆಯುತ್ತಿದೆ. ಚುನಾವಣೆಯಲ್ಲಿ ಜನರಿಂದ ಒದೆಸಿಕೊಂಡ ಕಾಂಗ್ರೆಸ್(ಐ) ಮರ್ಯಾದಸ್ಥ ವಿರೋಧ ಪಕ್ಷವಾಗಿ ವರ್ತಿಸುತ್ತದೆ ಎಂದು ಅಪೇಕ್ಷಿಸುವುದು ಮೂರ್ಖತನ ಎನ್ನುವಷ್ಟು ಕಾಂಗ್ರೆಸ್(ಐ) ವಿಧಾನ ಸಭೆಯಲ್ಲಿ ಗದ್ದಲ ಮಾಡುತ್ತಿದೆ. ಸಾಮೂಹಿಕವಾಗಿ ಕಾಂಗ್ರೆಸ್(ಐ)ಶಾಸಕರೆಲ್ಲರಿಗೂ ತಲೆ ಕೆಟ್ಟಿದೆಯೇನೋ ಎಂದು ಸಂಶಯ ಬರುವಷ್ಟು ಕೀಳು ಮಟ್ಟಕ್ಕೆ ಇವರ ವರ್ತನೆ ಮುಟ್ಟಿದೆ. ಇವರ ಹುಚ್ಚಾಟದ ಗದ್ದಲದಲ್ಲಿ ಎರಡೂ ಬಜೆಟ್‌ಗಳ ಪ್ರಾಮುಖ್ಯತೆ ಮುಳುಗಿಹೋದಂತಿದೆ. ಇದೇ ಅವರ ಉದ್ದೇಶ ಇದ್ದಂತಿದೆ.

ಪಶ್ಚಿಮ ಬಂಗಾಳದಲ್ಲಿ ಬಜೆಟ್ ಅಧಿವೇಶನದಲ್ಲಿ ಕಾಂಗ್ರೆಸ್(ಐ) ಡಜನ್‌ಗೂ ಹೆಚ್ಚು ಸಭಾತ್ಯಾಗ, ಧರಣಿ ಮತ್ತು ಬಹಿಷ್ಕಾರದಲ್ಲಿ ತೊಡಗಿತ್ತು. ಕಾಂಗ್ರೆಸ್ ಶಾಸಕ ಸಾಧನಾ ಪಾಂಡೆ, ಸಿ.ಪಿ.ಐ.(ಎಂ) ಶಾಸಕಿಯನ್ನು ಅಶ್ಲೀಲವಾಗಿ ಬಯ್ಯುವವರೆಗೆ ಇದು ಮುಟ್ಟಿದೆ. ಇದಕ್ಕಾಗಿ ಆ ಶಾಸಕರನ್ನು ಅಧಿವೇಶನ ಪೂರ್ತಿ ಹೊರಗೆ ಹಾಕಲಾಗಿದೆ. ಇದಲ್ಲದೆ ನಾಲ್ಕು ಶಾಸಕರನ್ನು ತಾತ್ಕಾಲಿಕವಾಗಿ ಸಭೆಯಿಂದ ಹೊರಗೆ ಹಾಕಲಾಗಿತ್ತು ಅಸಭ್ಯ ವರ್ತನೆಗಾಗಿ.

ಕೇರಳದಲ್ಲಿ ಎಡ-ಪ್ರಜಾಪ್ರಭುತ್ವರಂಗದ ದಿಟ್ಟ ಬಜೆಟ್‌ನ್ನು ಎದುರಿಸುವುದು ಹೇಗೆಂದು ದಿಕ್ಕುತೋಚದೆ, ಅರ್ಥ ಮಂತ್ರಿಯ ಭಾಷಣದಲ್ಲಿದ್ದ ಸಣ್ಣ ಪುಟ್ಟ ಮುದ್ರಣ ಮತ್ತು ತಾಂತ್ರಿಕ ದೋಷಗಳ ಬಗ್ಗೆ ದೊಡ್ಡದಾಗಿ ದಾಂಧಲೆ ಎಬ್ಬಿಸಿದೆ. ಕರುಣಾಕರನ್ ನಾಯಕತ್ವದ ಯು. ಡಿ. ಎಫ್. ಬಜೆಟ್‌ನ ನೀತಿ-ನಿಲುವುಗಳನ್ನು ಟೀಕಿಸುವ ತಾಕತ್ತು ಇಲ್ಲದಿರುವುದೇ ಇದಕ್ಕೆ ಕಾರಣ.

[8ನೇ ಪುಟ ನೋಡಿ]

ಕಾ|| ಸುರಜೀತ್‌ರವರ ಸಿಖ್ ವೇಷ - ಭೂಷಣಗಳು

ಜಾತೀಯ ಮತೀಯ ಆಚಾರಗಳ ವಿರುದ್ಧ ಹೋರಾಟ ಮಾಡುವುದೊಂದೇ ಬಹಳ ತುರ್ತಿನದು ಎನ್ನುವಂತೆ ಈ ಪ್ರಶ್ನೆಯ ಭಾವ ಇದೆ. ಆದರೆ ಅದು ಸರಿಯಲ್ಲ. ಆಧುನಿಕ ಬಂಡವಾಳಶಾಹಿ ಪ್ರಜಾಸತ್ತಾತ್ಮಕ ಬದಲಾವಣೆಯ ಸಮಯದಲ್ಲಿ ಜಾತಿ, ಮತ, ಮೂಢ ನಂಬಿಕೆಗಳು ಹಾಗೂ ಅದಕ್ಕೆ ಸಂಬಂಧಿಸಿದ ಆಚಾರಗಳಿಗೆ ವಿರುದ್ಧವಾದ ಹೋರಾಟ ಪ್ರಮುಖವಾದುದು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಈ ಚಳುವಳಿ ಬೆಳೆಯುವಾಗ, ದೇಶದ ಸ್ವಾತಂತ್ರ್ಯ, ಪ್ರಜಾಸತ್ತಾತ್ಮಕ ರಾಷ್ಟ್ರೀಯ ಸಂವಿಧಾನ ಸುಲಿಗೆ ಶೋಷಣೆಗೊಳಗಾದ ದುಡಿಯುವ ಜನರ ಚಳುವಳಿ ಈ ಪ್ರಶ್ನೆಗಳು ಪ್ರಧಾನ ಪಾತ್ರವಹಿಸುತ್ತವೆ. ಈ ಪ್ರಧಾನವಾದ ಹೋರಾಟಕ್ಕೆ ಜಾತೀ,ಮತೀಯ ವಿಚಾರಗಳಿಗೆದುರಾದ ಹೋರಾಟ ಅಧೀನವಾಗಿರಬೇಕಾಗುತ್ತದೆ.

ಇಡೀ ಕೇರಳದಲ್ಲಿ ನಡೆದದ್ದು. ನಿಮ್ಮ ಮೆಚ್ಚುಗೆಗೆ ಪಾತ್ರವಾದ ಜುಟ್ಟು ಜನಿವಾರಗಳಂತಹ ಜಾತೀಯ ಕುರುಹುಗಳ ತ್ಯಾಗದ ಸಾಮಾಜಿಕ ಚಳುವಳಿಯು ಕ್ರಮೇಣ ಎಡ ಚಳುವಳಿಯಾಗಿ ನಂತರ ಕಮ್ಯುನಿಸ್ಟ್ ಪಕ್ಷವಾಗಿ ಪರಿವರ್ತಿತವಾಯಿತು.

ಸಾಮಾಜಿಕ ಆಚಾರಗಳ ವಿರುದ್ಧವಾದ ಇಂದಿನ ಚಳುವಳಿ, ಆರ್ಥಿಕ ಶೋಷಣೆಯ ವಿರುದ್ಧವಾದ ಹಾಗೂ ಸರ್ವಾಧಿಕಾರಿ ಪ್ರವೃತ್ತಿಗೆ ಎದುರಾದ ಹೋರಾಟದ ಭಾಗವಾಗಿದೆ.

ಆರ್ಥಿಕ ಹಾಗೂ ರಾಜಕೀಯ ರಂಗಗಳಲ್ಲಿ ಬರಬೇಕಾದ ಕ್ರಾಂತಿಕಾರಿ ಬದಲಾವಣೆಗಳಿಗೆ ಸಾಮಾಜಿಕ ಬದಲಾವಣೆಗಳು ಅಧೀನವಾಗಿ ಬರತೊಡಗಿವೆ.

ಈ ಹಿನ್ನೆಲೆಯಲ್ಲಿಯೇ ನಾನಾಗಲೀ, ಸುರ್ಜೀತ್ ಆಗಲಿ, ಯಾವುದೇ ಕಮ್ಯುನಿಸ್ಟರಾಗಲಿ ವಹಿಸಿದ ಪಾತ್ರದ ಬಗ್ಗೆ ಬೆಲೆಕಟ್ಟಬೇಕು. ಕೇರಳದಲ್ಲಿ ಜಾತಿ ಸಂಬಂಧವಾದ ಅನಾಚಾರಗಳೂ ಮೂಢ ನಂಬಿಕೆಗಳೂ ಹಾಗೂ ಇವುಗಳಿಗೆದುರಾಗಿ ಮೊದಲಿನಿಂದಲೇ ನಡೆದ ಹೋರಾಟಗಳು ನಿಧಾನವಾಗಿ ರಾಜರ ಆಡಳಿತದಲ್ಲಿಯೂ ಜವಾಬ್ದಾರಿ ಸರ್ಕಾರಗಳನ್ನು, ಸ್ಥಾಪಿಸುವುದರಲ್ಲಿ ಕೃಷಿ ಸಂಬಂಧಗಳ ಹಳೆಯ ಕಂದಾಚಾರಗಳನ್ನು ಮಾರ್ಪಡಿಸುವಲ್ಲಿ ಕೊನೆಗೊಂಡಿತು.

ಈ ಪ್ರಶ್ನೆಯ ಬಗ್ಗೆ ಸುರ್ಜೀತ್‌ರವರನ್ನು ಮಾತ್ರವಲ್ಲ ನನ್ನನ್ನೂ ಅನೇಕರು ಟೀಕಿಸುತ್ತಾರೆ. ಜುಟ್ಟು ಜನಿವಾರವನ್ನು ತೊಡೆದು ಹಾಕಿದ್ದರೂ ನನ್ನ ಹೆಸರಿನಲ್ಲಿ ಜಾತೀಯ ಹೆಸರು ಇನ್ನೂ ಹೋಗಿಲ್ಲ. ನನ್ನ ಮನೆಯಲ್ಲಿ ನಡೆದ ವಿವಾಹಗಳೆಲ್ಲಾ ನನ್ನ ಜಾತಿಯ ಒಳಗೆ ನಡೆದಿದೆ ಎಂದು ಟೀಕಿಸುತ್ತಾರೆ.

ಆದರೆ, ಪುರೋಹಿತಶಾಹಿ ಗಿಂತಲೂ ಬಲವಾದ ಜನ್ಮಿಗಳ ಪ್ರಭುತ್ವ-ಪಾಳೆಯಗಾರಿ ಭೂಮಾಲೀಕರ ಪ್ರಭುತ್ವಕ್ಕೆ ವಿರುದ್ಧ ಬಡ ಜನರನ್ನು ಅಣಿ ನೆರಸುವುದರಲ್ಲಿ ಈ ಲೇಖಕ ವಹಿಸಿದ ಪಾತ್ರ ಅಪ್ರಮುಖವಾದದ್ದೇನಲ್ಲ ಎಂದು ಈ ಟೀಕಾಕಾರರು ಕೂಡ ಒಪ್ಪುವಂತಹ ವಿಷಯುವೇ.

ಕಳೆದ 5ವರ್ಷಗಳಲ್ಲಿ ಕೇರಳದಲ್ಲಿ ಉಂಟಾದ ಪ್ರಮುಖ ಬದಲಾವಣೆಗಳಾದ ಕುಟುಂಬ ವ್ಯವಸ್ಥೆ ಹಾಗೂ ಭೂಮಾಲೀಕ ಗೇಣಿದಾರ ಸಂಬಂಧದ ವಿರುದ್ಧವಾದ ಈ ಎರಡು ಚಳುವಳಿಗಳಲ್ಲಿ ಈ ಲೇಖಕ ಭಾಗವಹಿಸಿದ್ದಾರೆ ಆರಂಭದಲ್ಲಿ ಜುಟ್ಟು ಜನಿವಾರವನ್ನು ಬಿಟ್ಟದ್ದರ ಮುಂದಿನ ಬೆಳವಣಿಗೆ ಇದು. ಹೆಸರಿನಲ್ಲಿ ಜಾತಿಗಳಲ್ಲಿ ಉಳಿದಿರುವ ಕೆಲವು ಅಂಶಗಳಾಗಲೀ ಪ್ರಮುಖವಾದ ಚಳುವಳಿಗೆ ಯಾವುದೇ ಅಡೆ ತಡೆಗಳನ್ನುಂಟುಮಾಡಲಿಲ್ಲ.

ಇದೇ ಸುರಜೀತ್‌ರವರಿಗೂ ಅನ್ವಯಿಸುತ್ತದೆ. ಸಿಕ್ ಜನ ಸಮುದಾಯದ ವಿವಿಧ ಆಚಾರಗಳನ್ನು ಉಳಿಸಿಕೊಂಡಿದ್ದರೂ ಕೂಡ ಅದರ ಅಡಿಯಾಳಾಗಿರುವ ಸಾಮಾಜಿಕ ಸಂಬಂಧಗಳಿಗೆದುರಾಗಿ ಹೋರಾಡುವುದರಲ್ಲಿ ಸಕ್ರಿಯ ಪಾತ್ರ ವಹಿಸಿದ್ದಾರೆ. ಸಿಖ್ ಧರ್ಮದ ಮುಖಂಡರಿಗೆ ವಿರುದ್ಧವಾದ ಹೋರಾಟದಿಂದ ಆರಂಭವಾಗಿ ಇತ್ತೀಚಿಗೆ ದೇಶದ ಐಕ್ಯತೆಗೆ ಭಯಂಕರ ಅಪಾಯವನ್ನೊಡ್ಡಿರುವ ತೀವ್ರವಾದಿಗಳಿಗೆದುರಾಗಿ ಜನರನ್ನು ಅಣಿನೆರಸುವ ಪ್ರತಿಯೊಂದು ಹಂತದಲ್ಲಿಯೂ ಸುರಜೀತ್ ಮಹತ್ವದಪಾತ್ರ ನಿರ್ವಹಿಸಿದ್ದಾರೆ.

ಅದರಿಂದಾಗಿಯೇ ಸಿಖ್‌ತೀವ್ರವಾದಿಗಳ ಕೊಲೆಪಟ್ಟಿಯಲ್ಲಿ ಸುರಜೀತ್‌ರವರ ಹೆಸರು ಮೊದಲನೆಯದಾಗಿದೆ.

ಈ ಪ್ರಶ್ನೆಯನ್ನು ಕೇಳಿದವರಿಗೆ ನನ್ನ ಹೆಸರಿನಲ್ಲಿ ಜಾತೀಯ ಹೆಸರು ಸೇರಿರುವುದು ಪ್ರಮುಖವಾಗಿ ಕಾಣಲಿಲ್ಲ. ಆದರೆ ಸುರಜೀತ್‌ರವರ ವೇಷ ಭೂಷಣಗಳ ಬಗ್ಗೆ ಇಷ್ಟೊಂದು ಚರ್ಚೆ ಏಕೆ ಅವಶ್ಯಕವಾಯಿತು. ಜಾತೀಯ ಹೆಸರು, ಜಾತಿ ಆಚಾರಗಳ ಅವಶೇಷಗಳು ಇವು ಇಂದೂ ಇದ್ದರೂ ವ್ಯವಸ್ಥೆಗೆ ಎದುರಾಗಿ ಮಾಡುತ್ತಿರುವ ಹೋರಾಟವೇ ಪ್ರಮುಖವಾದದ್ದು. ಇದು ಈ ಲೇಖಕನ, ಸುರಜೀತ್‌ರವರ ಹಾಗೂ ಎಲ್ಲ ಕಮ್ಯುನಿಸ್ಟರ ವಿಷಯದಲ್ಲಿಯೂ ಇದೇ ಸತ್ಯ. ●

ಪ್ರಶ್ನೆ-1

ಇ.ಎಂ.ಎಸ್.ರವರು ಜುಟ್ಟು ಜನಿವಾರ ಮೊದಲಾದ ಜಾತೀಯ ಚಿಹ್ನೆಗಳನ್ನು ಬಿಟ್ಟಿರುವುದರಿಂದ ಜನರ ಮಧ್ಯೆ ಹೊಂದಿಕೊಳ್ಳಲು ಸಾಧ್ಯವಾಗಿದೆ. ಹರ್‌ಕಿಷನ್ ಸಿಂಗ್ ಸುರಜಿತ್‌ರಂಥಹವರು ಗಡ್ಡ, ತಲೆಗೂದಲು, ಪೇಟ ಇವುಗಳನ್ನು ಇನ್ನೂಯಾಕೆ ಬಿಟ್ಟಿಲ್ಲ. ಪಕ್ಷದ ಪಾಲಿಟ್‌ಬ್ಯೂರೊ ಸದಸ್ಯರಾದ ಕಾ|| ಹರ್‌ಕಿಸನ್‌ಸಿಂಗ್ ಸುರಜೀತ್‌ರವರು ಈ ಜಾತೀಯನ್ನು ಇಟ್ಟುಕೊಂಡಿರುವಾಗ ನಮಗೆ ಸಿಕ್ ಜನರು ಮತಾಂಧತೆಗಳ ವಿರುದ್ಧ ಹೇಗೆ ಪ್ರಚಾರ ಮಾಡಲು ಸಾಧ್ಯ?

– ಸರಸ್ವತಿ, ಕೇರಳ

ಸಣ್ಣ ಕಾಫಿ ಬೆಳೆಗಾರರ ಸಮಾವೇಶ

"ಆಗಸ್ಟ್ ತಿಂಗಳಲ್ಲಿ ದಕ್ಷಿಣದ ನಾಲ್ಕು ರಾಜ್ಯಗಳ ಸಣ್ಣ ಬೆಳೆಗಾರರ ಪ್ರತಿನಿಧಿಗಳ ಸಮಾವೇಶವನ್ನು ವಯನಾಡಿನ ಕಟ್ಪೆಟ್ಟದಲ್ಲಿ ಸೇರಿಸಿ, ಅಖಿಲ ಭಾರತ ಕಿಸಾನ್ ಸಭಾ ಮತ್ತಿತರ ರೈತ ಸಂಘಗಳ ಸಹಾಯ ಪಡೆದು, ಕಾಫಿ ಬೋರ್ಡ್ ಎದುರು ಸತ್ಯಾಗ್ರಹ ಮತ್ತು ಪಿಕೇಟಿಂಗ್ ಹೋರಾಟದ ಕಾರ್ಯಾಚರಣೆಯನ್ನು ನಿರ್ಧರಿಸಿ ಸಮ್ಮತಿಸಬೇಕು."

ಈ ಕುರಿತು ಇದೇ ಜೂನ್ ತಾ.14 ರಂದು ಕೇರಳದ ವೈನಾಡು ಜಿಲ್ಲೆಯ ಸುಲ್ತಾನ್‌ಬತೇರಿಯಲ್ಲಿ ಸೇರಿದ ಕೇರಳದ ಸಣ್ಣ ಕಾಫಿ ಬೆಳೆಗಾರರ ಸಮಾವೇಶದಲ್ಲಿ ತೀವ್ರ ಚರ್ಚೆ ನಡೆಯಿತು. ಅಖಿಲ ಭಾರತ ಕಿಸಾನ್ ಸಭೆಯ ಮುಖಂಡರಾದ ಕಾ|| ನಾರಾಯಣ ನಂಬಿಯಾರ್, ಎಂ. ಎ. (ಕೇರಳ ಕರ್ಷಕ ಸಂಘದ ಪ್ರಧಾನ ಕಾರ್ಯದರ್ಶಿ),ಪಿ. ರಾಮಚಂದ್ರರಾವ್(ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ) ಮತ್ತು ಕರುಪ್ಪಯ್ಯ (ತಮಿಳುನಾಡು ರೈತ ಸಂಘದ ಉಪಾಧ್ಯಕ್ಷ)ಇವರು ಸಮಾವೇಶದಲ್ಲಿ ಉಪಸ್ಥಿತರಿದ್ದರು.

ಕೇರಳದಲ್ಲಿ 61000, ಕರ್ನಾಟಕದಲ್ಲಿ 27000 ಮತ್ತು ತಮಿಳುನಾಡಿನಲ್ಲಿ 15000ಕ್ಕೂ ಅಧಿಕ ಸಂಖ್ಯೆಯಲ್ಲಿ 4ಹೆಕ್ಟಾರ್ [10ಲಕ್ಷ] ಕ್ಕಿಂತ ಕಡಿಮೆವುಳ್ಳ ಸಣ್ಣ ಕಾಫಿ ಬೆಳೆಗಾರರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದೇ ಈ ಸಮಾವೇಶದ ಉದ್ದೇಶವಾಗಿತ್ತು.

ಸರಿ ಸುಮಾರು 1968ರಿಂದಲೇ ಕೇರಳದ ಸಣ್ಣ ಕಾಫಿ ಬೆಳೆಗಾರರು ಸಂಘಟಿತರಾಗಿ ಸತತವಾಗಿ ಹಲವು ತರದ ಹೋರಾಟಗಳನ್ನು ನಡೆಸಿದಾಗ್ಯೂ ಅವರ ಪ್ರಮುಖ ಸಮಸ್ಯೆಗಳಿಗೆ ಕಾಫಿ ಬೋರ್ಡ್ ಆಗಲೀ, ಕೇಂದ್ರ ಸರ್ಕಾರವಾಗಲೀ ಯಾವುದೇ ಪರಿಹಾರಗಳನ್ನು ಕಂಡುಕೊಳ್ಳಲು ಮುಂದಾಗಲಿಲ್ಲ.

ಇದನ್ನೆಲ್ಲಾ ಗಮನದಲ್ಲಿಟ್ಟೇ ಪಿ. ರಾಮಚಂದ್ರರಾವ್‌ಇವರು 180ಕ್ಕೂ ಅಧಿಕ ಪ್ರತಿನಿಧಿಗಳುಳ್ಳ ಸಮಾವೇಶವನ್ನು ಉದ್ಘಾಟಿಸುತ್ತಾ 'ನಿಮ್ಮ ಸಮಸ್ಯೆಗಳು ಕೇವಲ ನಿಮ್ಮ ಸಮಸ್ಯೆಗಳಲ್ಲ. ರಾಷ್ಟ್ರದ 1ಲಕ್ಷಕ್ಕೂ ಅಧಿಕ ಸಣ್ಣ ಬೆಳೆಗಾರರ ಸಮಸ್ಯೆಗಳು. ಈ ಸಮಸ್ಯೆಗಳಿಗೆ ಪರಿಹಾರ ಕೊಡಬೇಕಾದ ಸಂಸ್ಥೆ ಕೇರಳ ರಾಜ್ಯದ ಪ್ರತ್ಯೇಕ ಸಂಸ್ಥೆಯಲ್ಲ, ಇಡೀ ದೇಶದ ಕಾಫಿ ಗುತ್ತಿಗೆ ಸಂಸ್ಥೆ ಅಖಿಲ ಭಾರತ ಕಾಫಿ ಬೋರ್ಡ್. ಈ ರಾಷ್ಟ್ರ ಸಂಸ್ಥೆಯ ಧೋರಣೆಗಳನ್ನು ನಿರೂಪಿಸುವುದು ಕೇರಳದ ರಾಜ್ಯಸರ್ಕಾರವಲ್ಲ, ಭಾರತದ ಕೇಂದ್ರ ಸರ್ಕಾರ-ಮತ್ತೂ ವಿಶ್ಲೇಷಿಸಿದರೆ, ಭಾರತದ ಕೇಂದ್ರ ಸರಕಾರದ ಆರ್ಥಿಕ ನೀತಿಗಳನ್ನು ಸೂತ್ರೀಕರಿಸುವುದು ಐ. ಎಂ. ಎಫ್. ಮತ್ತು ಜಾಗತಿಕ ಬ್ಯಾಂಕ್-ಸಾಮ್ರಾಜ್ಯಶಾಹಿಗಳ ಕೂಸುಗಳು,ಏಜೆಂಟ್‌ಸಂಸ್ಥೆಗಳು. ಆದ ಕಾರಣ ನೀವು ನಿಮ್ಮ ಹೋರಾಟವನ್ನು ರಾಷ್ಟ್ರದಾದ್ಯಂತ ಮುಖ್ಯವಾಗಿ ಸಣ್ಣ ಬೆಳೆಗಾರರು ಇರುವ ಕೇರಳ, ತಮಿಳುನಾಡು, ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಿಗೆ ಒಯ್ದು ವಿಶಾಲವಾದ, ಐಕ್ಯವಾದ, ಸಂಘಟಿತವಾದ ಮತ್ತು ಎಡೆಬಿಡದೆ ಹೋರಾಟದ ಕಾರ್ಯಕ್ರಮ ಹಾಕಬೇಕು. ಅಖಿಲ ಭಾರತ ಕಿಸಾನ್ ಸಭಾದ ನೇತೃತ್ವದ ಸಹಾಯ ಪಡೆಯಬೇಕು" ಎಂದು ಹೇಳಿದರು.

ಸಣ್ಣ ಕಾಫಿ ಬೆಳೆಗಾರರ ಮುಖ್ಯ ಸಮಸ್ಯೆಗಳು :

1. ಒಂದು ಅಥವಾ ಎರಡು ಕಂತುಗಳಲ್ಲಿ ಕಾಫಿ ಬೋರ್ಡ್ ಸಣ್ಣ ಬೆಳೆಗಾರರಿಗೆ ಹಣ ಪಾವತಿ ಮಾಡಬೇಕು.
2. ಸಣ್ಣ ಬೆಳೆಗಾರರಿಗೆ 12.5./ ಬಡ್ಡಿದರದಲ್ಲಿ ಸಾಲಗಳನ್ನು ಒದಗಿಸಬೇಕು.
3. ಸಣ್ಣ ಬೆಳೆಗಾರರಿಗೆ ಕಾಫಿ ಸಸಿಗಳನ್ನು ಪುನರುಜ್ಜೀವನಗೊಳಿಸಲು ಸಬ್ಸಿಡಿ ಕೊಡಬೇಕು.
4. ಕಾಫಿ ಬೋರ್ಡಿನಲ್ಲಿ ಸಣ್ಣ ಕಾಫಿ ಬೆಳೆಗಾರರಿಗೆ ಅಧಿಕ ಪ್ರಾತಿನಿಧ್ಯ ಕೊಡಬೇಕು. ○

ಕೃಷ್ಣಾ ಮೇಲ್ದಂಡೆ ಯೋಜನೆ - ಹೋರಾಟಕ್ಕೆ ಕರೆ

ಕರ್ನಾಟಕ ಪ್ರಾಂತ ರೈತ ಸಂಘದ ಬಿಜಾಪುರ ಜಿಲ್ಲಾ ಸಮಿತಿ ಸಭೆಯು ಜೂನ್11ರಂದು ಕಾ|| ಭೀಮಶಿ ಕಲಾದಗಿಯವರ ಅಧ್ಯಕ್ಷತೆಯಲ್ಲಿ ಜರುಗಿ ಜಿಲ್ಲೆಯಲ್ಲಿ ಸಂಘಟನೆಯ ಸಂಘಟನಾ ಪರಿಸ್ಥಿತಿ ಕುರಿತು ವಿಶೇಷವಾಗಿ ಚರ್ಚಿಸಲಾಯಿತು. ಈ ಸಭೆಗೆ ರಾಜ್ಯ ಪದಾಧಿಕಾರಿಗಳಾದ ಕಾ|| ಕಲಪ್ಪ ಕಿರಣಗಿ ಹಾಗೂ ಚಂದ್ರಶೇಖರ ಬಾಳೆಯವರು ಉಪಸ್ಥಿತರಿದ್ದರು.

ರೈತ ಕೃಷಿಕೂಲಿಕಾರರ ಮೂಲಭೂತ ಸಮಸ್ಯೆಗಳ ಪರಿಹಾರಕ್ಕಾಗಿ ಅಖಿಲಭಾರತ ಕಿಸಾನ್ ಸಭಾ ಸಪ್ಟೆಂಬರ್ 7ರಿಂದ 13ರ ವರೆಗೆ ರಾಷ್ಟ್ರ ಮಟ್ಟದ ಚಳುವಳಿ ನಡೆಸಲು ನೀಡಿರುವ ಕರೆಯನ್ನು ಜಿಲ್ಲೆಯಾದ್ಯಂತ ಯಶಸ್ವಿಗೊಳಿಸಲು ಕರೆ ಕೊಟ್ಟಿತು.

ಜಿಲ್ಲೆಯ ಪ್ರಮುಖ ಸಮಸ್ಯೆಗಳಲ್ಲೊಂದಾದ ಬರಗಾಲ ಶಾಶ್ವತ ಪರಿಹಾರ, ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಶೀಘ್ರಗತಿಯಲ್ಲಿ ಜಾರಿಗೊಳಿಸುವ ಬೇಡಿಕೆಗೆ ಒತ್ತಾಯಿಸಿ ಜಿಲ್ಲೆಯ ಎಲ್ಲಾ ರೈತ ಸಂಘಗಳು ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಜಂಟಿಯಾಗಿ ಹೋರಾಟ ನಡೆಸಲು ನಿರ್ಧರಿಸಲಾಯಿತು. ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಜಾರಿಗೊಳಿಸುವಲ್ಲಿ ವಿಳಂಬ ನೀತಿಯನ್ನು ಅನುಸರಿಸುತ್ತಿರುವ ಕೇಂದ್ರ ಕಾಂಗ್ರೆಸ್ ಹಾಗೂ ರಾಜ್ಯದ ಜನತಾ ಸರ್ಕಾರದ ರೈತ ವಿರೋಧಿ ನೀತಿಯನ್ನು ಖಂಡಿಸಿತು. ○

ಐಕ್ಯರಂಗಕ್ಕೆ ಕಾಣಿಕೆ

ಕಾ.ಅಮರಪ್ಪ ಶೇಖ್ ಮತ್ತು ಆದಮ್ಮ ಬೆಲ್ಲದ ಅವರ ವಿವಾಹವು ಮೇ 18 ರಂದು ಸಿಂಧನೂರಿನಲ್ಲಿ ನಡೆಯಿತು. ತಮ್ಮ ಮದುವೆಯ ಸವಿನೆನಪಿಗಾಗಿ 'ಐಕ್ಯರಂಗಕ್ಕೆ' 25 ರೂ ಕಾಣಿಕೆ ನೀಡಿರುವ ವಧೂವರರಿಗೆ ಐಕ್ಯರಂಗ ತನ್ನ ಶುಭಾಶಯಗಳನ್ನು ಸಲ್ಲಿಸುತ್ತದೆ.

ಡಿ. ವೈ. ಎಫ್. ಐ. ನಿಂದ 'ಆಫ್ರಿಕಾ ದಿನ'

1987 ಮೇ 3-4 ಬೆಂಗಳೂರಿನಲ್ಲಿ ರಾಜ್ಯ ಸಮಿತಿಯಸಭೆಯು ಕಾ||ಮಹಾಬಲ ವಡೇರ ಹೋಬ್ಳಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ರಾಜ್ಯ ಕಾರ್ಯದರ್ಶಿ ಎಸ್.ಶಿವರಾಂ ಇವರು ಸಮಗ್ರ ಚಟುವಟಿಕೆಗಳ ವರದಿ ಮಂಡಿಸಿದರು. ಮತ್ತು ಡಿಸೆಂಬರ್ 15 ರಿಂದ 19 ರವರೆಗೆ ಮದರಾಸಿನಲ್ಲಿ ನಡೆಯಲಿರುವ ಡಿ. ವೈ. ಎಫ್. ಐ. 3 ನೇ ರಾಷ್ಟ್ರ ಸಮ್ಮೇಳನದ ವಿವರಗಳನ್ನು ಪ್ರಕಟಿಸಿದರು.

ರಾಜ್ಯ ಸಮಿತಿಯು ವಿದ್ಯುತ್ ದರ ಏರಿಕೆಯನ್ನು ತೀವ್ರವಾಗಿ ಖಂಡಿಸಿದೆ. ಮೇ ಮತ್ತು ಜೂನ್ ತಿಂಗಳುಗಳ ಒಳಗಾಗಿ 1987 ರ ಸದಸ್ಯತ್ವಪೂರ್ಣವಾಗಬೇಕು. ಕಾಂಗ್ರೆ ಕೇಂದ್ರ ಸರ್ಕಾರ ಆಕಾಶವಾಣಿ ಮತ್ತು ದೂರದರ್ಶನ ಕೇಂದ್ರಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ವಿರುದ್ಧ ಪ್ರತಿಭಟಿಸಬೇಕು. ರಾಜ್ಯಕ್ಕೆ ಎರಡನೇ ಚಾನಲ್ ದೂರದರ್ಶನ ಕೇಂದ್ರವನ್ನು ಸ್ಥಾಪಿಸಬೇಕು. ಏ.ಎನ್.ಸಿ. ಎಪ್ಪತ್ತೈದನೇ ವಾರ್ಷಿಕೋತ್ಸವದ ಅಂಗವಾಗಿ ಜೂನ್ 26 ರಂದು ರಾಜ್ಯದಾದ್ಯಂತ 'ಆಫ್ರಿಕಾ ದಿನ' ವನ್ನು ಮೆರವಣಿಗೆ, ವಿಚಾರ ಸಂಕಿರಣಗಳ ಮೂಲಕ ಆಚರಿಸಬೇಕು ಅಕ್ಟೋಬರ್ ಮೊದಲ ವಾರದಲ್ಲಿ ಕೋಲಾರದಲ್ಲಿ 3ನೇ ರಾಜ್ಯ ಸಮ್ಮೇಳನವನ್ನು 1986ರ ಸದಸ್ಯತ್ವದ ಆಧಾರದಲ್ಲಿ ವ್ಯಾಪಕಪ್ರಚಾರ ಪ್ರಕ್ಷೋಭೆಗಳ ಮೂಲಕ ವಿಜೃಂಭಣೆಯಿಂದ ಆಚರಿಸಬೇಕೆಂದು ರಾಜ್ಯ ಸಮಿತಿಯು ತೀರ್ಮಾನಿಸಿದೆ. ●

ದೇಶದೆಲ್ಲೆಡೆಯಲ್ಲಿ ರೈತರ ಧ್ವನಿ ಏಳಲಿ

ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಸಭೆಯಲ್ಲಿ ಕಾ|| ಶಂಕರಯ್ಯ

ಜೂನ್20,21ರಂದು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮಿತಿ ಸಭೆ ಶ್ರೀ ಎಂ.ಎಸ್. ಉಗ್ರಪ್ಪನವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ನಡೆಯಿತು.

ಈ ಸಭೆಯಲ್ಲಿ ಶ್ರೀ ಶಂಕರಯ್ಯ ಅಖಿಲ ಭಾರತ ಕಿಸಾನ್‌ಸಭಾ ಪ್ರಧಾನ ಕಾರ್ಯದರ್ಶಿಯವರು ಉಪಸ್ಥಿತರಿದ್ದು, ಸೆಪ್ಟಂಬರ್7ರಿಂದ 13ರವರೆಗೆ ಅಖಿಲ ಭಾರತ ಪಿಕೆಟಿಂಗ್ ಮುಷ್ಕರವನ್ನು ಕರ್ನಾಟಕದಲ್ಲಿ ಯಶಸ್ವಿಗೊಳಿಸಲು ಕರೆ ಕೊಟ್ಟರು.

ಅಖಿಲ ಭಾರತ ಕಿಸಾನ್‌ಸಭಾ, ರಾಷ್ಟ್ರ ಮಟ್ಟದಲ್ಲಿ ಗ್ರಾಮೀಣ ರೈತ, ಕೃಷಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳು,ನಲ್ವತ್ತುವರ್ಷದ ಗುತ್ತೇದಾರಿ ಬಂಡವಾಳಶಾಹಿ ಭೂಮಾಲೀಕ ಸರ್ಕಾರದ ನೀತಿಯಿಂದಾಗಿ, ಉದ್ಭವಿಸಿವೆ.

ಅಖಿಲ ಭಾರತ ಕಿಸಾನ್ ಕೌನ್ಸಿಲ್ ಎಪ್ರಿಲ್ ತಿಂಗಳಲ್ಲಿ ಒರಿಸ್ಸಾ ರಾಜ್ಯದ ಕಟಕ್‌ನಲ್ಲಿ ನಡೆದು ಪರ್ಯಾಯ ಕೃಷಿ ನೀತಿಯನ್ನು ತರಲು ಒತ್ತಾಯಿಸಿ, ರಾಷ್ಟ್ರಮಟ್ಟದಲ್ಲಿ ಹನ್ನೆರಡು ಬೇಡಿಕೆಗಳನ್ನು ಒತ್ತಾಯಿಸಿ ಸೆಪ್ಟಂಬರ್7 ರಿಂದ 12,ರವರೆಗೆ ರಾಷ್ಟ್ರವ್ಯಾಪಿ, 23 ರಾಜ್ಯಗಳಲ್ಲೂ ಪಿಕೇಟಿಂಗ್ ಮುಖಾಂತರ, ಕೋಟಿಗಟ್ಟಲೆ ರೈತ ಕಾರ್ಮಿಕರನ್ನು ಜೈಲಿಗೆ ಕಳಿಸಲು ಕರೆ ಕೊಡಲಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ, 1] ಪ್ರಗತಿಪರ ಭೂಸುಧಾರಣೆ, ಬಂಜರು ಭೂಮಿ, ಇತರೆ ಸರಕಾರಿ ಭೂಮಿಯಲ್ಲಿ ಅಕ್ರಮ ಸಾಗುವಳಿ ಮಾಡಿದ ಭೂರಹಿತ, ಬಡರೈತರಿಗೆ ಭೂಮಿಯನ್ನು ಸಕ್ರಮಗೊಳಿಸುವುದು. 2] 40%ಜನರು ಬರಗಾಲದಿಂದ ನರಳುತ್ತಿದ್ದಾರೆ. ತಾತ್ಕಾಲಿಕ,ಕಾಮಗಾರಿ, ಕುಡಿಯುವ ನೀರು, ಹಾಗೂ ಜಾನುವಾರುಗಳಿಗೆ ಮೇವು ಒದಗಿಸುವುದು, ಶಾಶ್ವತ ಪರಿಹಾರವಾಗಿ ಎಲ್ಲಾ ಬೃಹತ್, ಹಾಗೂ ಸಣ್ಣ ನೀರಾವರಿಗಳನ್ನು ಕೂಡಲೇ ಕೈಗೆತ್ತಿಕೊಂಡು ಶೀಘ್ರದಲ್ಲಿ ಮುಗಿಸುವುದು. 3] ರೈತರು ಬೆಳೆದ ಮಾಲಿಗೆ ಬಿತ್ತುವ ಪೂರ್ವದಲ್ಲಿಯೇ ಬೆಂಬಲಿತ ಬೆಲೆಯನ್ನು ಘೋಷಿಸುವುದು. ಜೊತೆಗೆ ವಸತಿ ಸಮಸ್ಯೆ, ಕೃಷಿಸಾಲ, ಬೀಜ, ಕ್ರಿಮಿ ನಾಶಕ, ಕನಿಷ್ಟ ಕೂಲಿ, ಅಖಿಲ ಭಾರತ ಮಟ್ಟದ ಕೃಷಿ ಕಾರ್ಮಿಕರ ರಕ್ಷಣಾ ಮಸೂದೆ.

ಹೀಗೆ ಹನ್ನೆರಡು ಬೇಡಿಕೆಗಳನ್ನು ಒತ್ತಾಯಿಸುವ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಸಮಾವೇಶಗಳನ್ನು, ಕಾಲು ಜಾತಾ, ಸೈಕಲ್ ಜಾತಾ, ಜೀಪ್ ಜಾತಾಗಳ ಮುಖಾಂತರ, ರೈತಾಪಿ ಜನರಿಗೆ ಬೇಡಿಕೆಗಳ ಮನವರಿಕೆ ಮಾಡಿಕೊಟ್ಟು, ಕೊನೆಯಲ್ಲಿ ರಾಜ್ಯಮಟ್ಟದ ಸಮಾವೇಶವನ್ನು ಮಾಡಿ, ದೊಡ್ಡ ಸಂಖ್ಯೆಯಲ್ಲಿ ಗ್ರಾಮೀಣ ರೈತಾಪಿ ಜನತೆಯನ್ನು ಪಿಕೇಟಿಂಗ್ ನಡೆಸಲು ರಾಜ್ಯ ಸಮಿತಿ ಕರೆಕೊಟ್ಟಿದೆ.

ಸಿಂಧನೂರು

ಕುಡಿಯುವ ನೀರಿಗಾಗಿ ಹೋರಾಟ

ಶುದ್ಧವಾದ ಕುಡಿಯುವ ನೀರಿನ ತಾತ್ಕಾಲಿಕ ಮತ್ತು ಶಾಶ್ವತ ಪರಿಹಾರಕ್ಕಾಗಿ ಇನ್ನಿತರ ನಾಗರೀಕರ ಅವಶ್ಯಕ ಬೇಡಿಕೆಗಳಿಗಾಗಿ' ಮತ್ತು ಭ್ರಷ್ಟಾಚಾರದ ತನಿಖೆಗಾಗಿ, ಕಳೆದ ಕೆಲವು ವರ್ಷಗಳಿಂದ ಒತ್ತಾಯಿಸುತ್ತಾ ಬಂದರೂ ಸರಕಾರ ಮತ್ತು ಪುರಸಭೆಯ ಆಡಳಿತ ವರ್ಗ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಮೂರು ತಿಂಗಳುಗಳಿಂದ ನಿಂತು ಮಲಿನವಾದ ಹಲವು ರೋಗಗಳಿಗೆ, ಕಾರಣ ಭೂತವಾದ ಹೊಲಸು ನೀರನ್ನು ಪುರಸಭೆ ಒದಗಿಸುತ್ತಲಿದೆ. ನಾಗರೀಕ ಬೇಡಿಕೆಗಳಿಗಾಗಿಗಮನವನ್ನೇ ಹರಿಸಿಲ್ಲಾ. ಹಲವು ಭ್ರಷ್ಟಾಚಾರಗಳಿಗೆ ನಿರಂತರವಾಗಿ ಪುರಸಭೆಇಂಬುಕೊಟ್ಟಿದೆ. ಇದನ್ನು ಪ್ರತಿಭಟಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ನಗರದ ಹಲವಾರು ಜಾಗಗಳಲ್ಲಿ ಹೋರಾಟ ಸಮಿತಿಗಳನ್ನು ರಚಿಸಿಕೊಂಡು ಹೋರಾಟ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಮೊದಲ ಹಂತವಾಗಿ ದಿನಾಂಕ : 15-6-1987 ರಿಂದ; ನೂರಾರು ಜನರು ಮೆರವಣಿಗೆಯಲ್ಲಿ ಭಾಗವಹಿಸಿ ಮನವಿ ಪತ್ರವನ್ನು ಅರ್ಪಿಸಿ 'ಧರಣಿ' ಸತ್ಯಾಗ್ರಹವನ್ನು ಪ್ರಾರಂಭಿಸಲಾಯಿತು. ನೆರೆದ ಜನರನ್ನು ಉದ್ದೇಶಿಸಿ ಕಾ||ನರಸಿಂಹಪ್ಪ ಕಾ:ಶೇಷಾದ್ರಿ' ಕಾ||ಎನ್.ರಾಮನಗೌಡ ಮಾತನಾಡಿ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಹೋರಾಟಕ್ಕೆ ಬೆಂಬಲಿಸಲು ನಾಗರಿಕರಿಗೆ ವಿನಂತಿಸಿದರು. ಬೇಡಿಕೆಗಳ ಪಟ್ಟಿಯನ್ನು ಓದಿ ಆಡಳಿತ ವರ್ಗದವರೊಡನೆ ಚರ್ಚಿಸಿದ ವಿಷಯವನ್ನು ಕಾ||ಬಿ.ಲಿಂಗಪ್ಪ ವಿವರಿಸಿದರು. ಬೇಡಿಕೆ ಈಡೇರುವವರೆಗೆ ಹೋರಾಟವನ್ನು ಹಿಂತೆಗೆದುಕೊಳ್ಳುವುದಿಲ್ಲ ಎಂದು ಒಕ್ಕೊರಲಿನ ಕೂಗು, ಸಾರ್ವಜನಿಕರಿಂದ ಮೂಡಿಬಂತು. ಎಂದು ಪ್ರತಿಕಾ ಹೇಳಿಕೆ ತಿಳಿಸಿದೆ.

ಎಸ್. ಎಫ್. ಐ. ಹೋರಾಟ ಯಶಸ್ವಿ

ಹೊಸಪೇಟೆ ನಗರದವಾಸವಿ ಪ್ರೌಢ ಶಾಲಾ ಆಡಳಿತ ಮಂಡಳಿಯು ನಡೆಸುತ್ತಿರುವ ಪಿ.ವಿ.ಎಸ್.ಬಿ.ಶಾಲೆಯಲ್ಲಿ ಪ್ರವೇಶ ಪರೀಕ್ಷೆಗಳನ್ನು ಏರ್ಪಡಿಸುವುದರ ಮೂಲಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಮುಕ್ತ ಪ್ರವೇಶದ ಅವಕಾಶವನ್ನು ನಿರ್ಬಂಧಿಸುವ ಹಾಗೂ 8 ನೇಯ ತರಗತಿಯ ವಿಭಾಗವೊಂದನ್ನು ಮುಚ್ಚುವ ಆಡಳಿತ ಮಂಡಳಿಯ ನೀತಿಯ ವಿರುದ್ಧ ಪ್ರತಿಭಟಿಸಿ ಎಸ್. ಎಫ್.ಐ. ನಗರ ಸಮಿತಿಯು ದಿನಾಂಕ 11-6-87 ರಿಂದ ಧರಣಿ ಸತ್ಯಾಗ್ರಹ ಆರಂಭಿಸಿತು.

ಒಂದು ವಿಭಾಗವನ್ನು ಮುಚ್ಚುವ ನಿರ್ಧಾರವು ಕೆಲವು ಶಿಕ್ಷಕರನ್ನು ನಿರುದ್ಯೋಗಿಗಳನ್ನಾಗಿಸಿ ಮನೆಗೆ ಕಳಿಸುವ ಕ್ರಮವಾಯಿತು. ಇಂತಹ ವಿದ್ಯಾರ್ಥಿ ಪಾಲಕರ ಹಾಗೂ ಶಿಕ್ಷಕ ವಿರೋಧಿ ನೀತಿಯನ್ನು ಪ್ರತಿಭಟಿಸಲು ಧರಣಿ ಸತ್ಯಾಗ್ರಹ ಪ್ರತಿದಿನ ಆರಂಭಿಸಲಾಯಿತಲ್ಲದೇ ತರಗತಿಗಳಬಹಿಷ್ಕಾರ ಸಭೆಗಳು ನಡೆದವು. ಆಡಳಿತ ಮಂಡಳಿಯೊಂದಿಗೆ ನಡೆದ ಮಾತುಕತೆಗಳು ಮುರಿದು ಬಿದ್ದವು. ಹೋರಾಟ ಮುಂದುವರಿಯಿತು.

ಮುಷ್ಕರ ಮೂರನೆಯ ದಿನಕ್ಕೆ ಕಾಲಿರಿಸುತ್ತಿದ್ದಂತೆ ಶಿಕ್ಷಕ ಸಮುದಾಯವೂ ಸಹ ಚಳುವಳಿಗೆ ಇಳಿದು ಆಡಳಿತ ಮಂಡಳಿಗೆ ಮನವಿ ಸಲ್ಲಿಸಿತು. ಬೇಡಿಕೆಗಳನ್ನು ಈಡೇರಿಸುವವರೆಗೂ ಕಾದೂ ಸಹ ತರಗತಿಗಳನ್ನೂ ಬಹಿಷ್ಕರಿಸಲು ನಿರ್ಧರಿಸಿದರು. ಪಾಲಕರಿಂದಲೂ ಒತ್ತಡ ಬಂತು. ಕೊನೆಗೆ ಹೋರಾಟಕ್ಕೆ ಮಣಿದ ವಾಸವಿ ಆಡಳಿತ ಮಂಡಳಿಯು ವಿದ್ಯಾರ್ಥಿ ಮತ್ತು ಶಿಕ್ಷಕ ಸಮೂಹದ ಎಲ್ಲಾ ಬೇಡಿಕೆಗಳನ್ನು ಈಡೇರಿಸುವುದ ಗಿ ಭರವಸೆ ಇತ್ತರು. ಅವರಂತೆ ತತ್‌ಕ್ಷಣದಲ್ಲೇ ಕುಡಿಯುವ ನೀರಿನ ವ್ಯವಸ್ಥೆ ಶೌಚಾಲಯ ದ ವ್ಯವಸ್ಥೆಯಾಯಿತು.

ಬಡ ಶಾಲಾ ಮಕ್ಕಳಿಗೆ ಉಚಿತ ಪುಸ್ತಕ ವಿತರಣೆ

ತಾ. 3-6-87ರಂದು ಕುಲಶೇಕರ ಕೈಕಂಬದಲ್ಲಿರುವ ಬೀಡಿ ಯೂನಿಯನ್ (ಸಿ.ಐ.ಟಿ.ಯು.) ಆಫೀಸಿನಲ್ಲಿ ಸಂಘದ ಅಧ್ಯಕ್ಷರಾದ ಕಾ|| ಸಿ. ನಾರಾಯಣರವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಪದವು ಪ್ರದೇಶದ ಬಡ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿಕೊಂಡು ಹೋಗಲು ಧರ್ಮಾರ್ಥ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಮಾಡಿದರು. ಕೊನೆಗೆ ಸಂಘದ ಕಾರ್ಯದರ್ಶಿ ಕಾ|| ಬಾಬು ಪೇವಾಡಿಗರು ಧನ್ಯವಾದವನ್ನರ್ಪಿಸುತ್ತಾ ಈ ಪುಸ್ತಕ ವಿತರಣೆಗೆ ತಮ್ಮ ಸಹಾಯ ಸಹಕಾರವನ್ನಿತ್ತ ಹಿತೈಷಿಗಳಿಗೆ ಸಂಘದ ಪರವಾಗಿ ಅಭಿನಂದನೆ ಸಲ್ಲಿಸಿದರು.

ಆಕಾಶವಾಣಿ – ದೂರದರ್ಶನದ ದುರ್ಬಳಕೆಯ ವಿರುದ್ಧ

ಡಿ.ವೈ.ಎಫ್.ಐ. ಮತ್ತು ಎಸ್.ಎಫ್.ಐ. ಹೋರಾಟ

ಕಾಂಗ್ರೆಸ್ (ಐ) ನ ಕೇಂದ್ರ ಸರ್ಕಾರವು ಇಡೀ ದೇಶದ ಜನತೆಗೆ ಸೇರಿದ ಸಮೂಹ ಮಾಧ್ಯಮಗಳಾದ ಆಕಾಶವಾಣಿ ಮತ್ತು ದೂರದರ್ಶನಗಳನ್ನು ವೈಯಕ್ತಿಕ ಪ್ರಚಾರ ಸಾಧನವನ್ನಾಗಿ ಬಳಸಿಕೊಂಡು ವಿರೋಧ ಪಕ್ಷಗಳ ಹಾಗೂ ಅವುಗಳ ನೇತೃತ್ವದ ಸರ್ಕಾರಗಳ ವಿರುದ್ಧ ಅಪಪ್ರಚಾರ ನಡೆಸಲು ಪ್ರಯತ್ನಿಸುತ್ತಿರುವುದನ್ನು ಪ್ರತಿಭಟಿಸಬೇಕೆಂದು ಡಿ.ವೈ.ಎಫ್.ಐ ಮತ್ತು ಎಸ್.ಎಫ್.ಐ.ನ ಕೇಂದ್ರ ಸಮಿತಿಗಳು ನೀಡಿದ ಕರೆಯ ಮೇರೆಗೆ ದೇಶಾದ್ಯಂತ ಆಕಾಶವಾಣಿ ಮತ್ತು ದೂರದರ್ಶನ ಕೇಂದ್ರಗಳ ಎದುರು ಜೂನ್ 15 ರಂದು ಪ್ರತಿಭಟನಾ ಪ್ರದರ್ಶನಗಳು ನಡೆದಿವೆ.

ಧಾರವಾಡ

ಎಸ್.ಎಫ್.ಐ. ಮತ್ತು ಡಿ.ವೈ ಎಫ್.ಐ.ಗೆ ಸೇರಿದ ನೂರಾರು ಕಾರ್ಯಕರ್ತರು ಧಾರವಾಡದ ಆಕಾಶವಾಣಿ ಕೇಂದ್ರದ ಎದುರು ಜೂನ್ 15ರಂದು ಮತ ಪ್ರದರ್ಶನ ನಡೆಸಿದರು. ಆಕಾಶವಾಣಿ ಮತ್ತು ದೂರ ದರ್ಶನಗಳಲ್ಲಿ ಪ್ರಗತಿಪರ ಕಾರ್ಯಕ್ರಮಗಳು ಹೆಚ್ಚಾಗಬೇಕು, ಯುವ ಪ್ರತಿಭೆಗಳಿಗೆ ಹೆಚ್ಚಿನ ಅವಕಾಶ ನೀಡಬೇಕೆಂದು ಪ್ರದರ್ಶನಕಾರರು ಒತ್ತಾಯಿಸಿದರು. ಆಕಾಶವಾಣಿಯ ನಿರ್ದೇಶಕರಿಗೆ ಬೇಡಿಕೆಗಳನ್ನೊಳಗೊಂಡ ಮನವಿಪತ್ರವನ್ನು ನೀಡಲಾಯಿತು. ನಂತರ ಕಾರ್ಯಕರ್ತರನ್ನುದ್ದೇಶಿಸಿ ಕಾ. ಸಾದಿಕ್ ಸೌದಗರ್, ಕಾ||ಪಾರ್ವತಿ ಕಲಾಲ್, ಕಾ. ಕೃಷ್ಣ ಕಟ್ಟಿ, ನಾರಾಯಣ ದಳವಾಯಿ, ಕಾ. ಆರ್. ಎಸ್. ಪಜಾರಿಯವರ ಮಾತನಾಡಿದರು.

ಹೊಸ ಪೇಟೆ

ಹೊಸಪೇಟೆಯ ದೂರದರ್ಶನ ಮರುಪ್ರಸಾರ ಕೇಂದ್ರದ ಎದುರು ಪ್ರತಿಭಟನಾ ಪ್ರದರ್ಶನ ನಡೆಯಿತು. ಎಲ್ಲಾ ರಾಜ್ಯಗಳಿಗೂ ಎರಡನೆಯ, ಟಿ.ವಿ. ಚಾನಲ್ ಕೊಡಬೇಕೆಂದೂ, ಜನಪರವಾದ ಪ್ರಜಾಸತ್ತಾತ್ಮಕ ಸಂಸ್ಕೃತಿ, ಮೌಲ್ಯಗಳನ್ನು ಪ್ರತಿಬಿಂಬಿಸುವ ಕಾರ್ಯಕ್ರಮಗಳನ್ನು ಹೆಚ್ಚಾಗಿ ಪ್ರಸಾರ ಮಾಡಬೇಕೆಂದು ಒತ್ತಾಯಿಸುವ ಮನವಿ ಪತ್ರವನ್ನು ಅರ್ಪಿಸಲಾಯಿತು. ನಂತರದ ಸಭೆಯಲ್ಲಿ ಸಂಗಾತಿಗಳಾದ ಜಂಬಯ್ಯ ನಾಯಕ್, ರಾಮನಾಥ್, ಮಂಜುನಾಥ್, ಗುರುಶಾಂತ್ ಮಾತನಾಡಿದರು.

ಭದ್ರಾವತಿ

ಭದ್ರಾವತಿಯ ಆಕಾಶವಾಣಿಕೇಂದ್ರದ ಎದುರು ಡಿ.ವೈ.ಎಫ್.ಐ. ಮತ್ತು ಎಸ್.ಎಫ್‌ಐ. ಕಾರ್ಯಕರ್ತರು ಪ್ರತಿಭಟನಾ ಪ್ರದರ್ಶನ ನಡೆಸಿದರು. ಆಕಾಶವಾಣಿಯ ನಿರ್ದೇಶಕರಿಗೆ ಮನವಿ ಪತ್ರ ನೀಡಿ ರಾಜ್ಯಗಳಿಗೆ ಟಿ.ವಿ.ಯ. ಎರಡನೇ ಚಾನಲ್ ನೀಡಬೇಕೆಂದು ಒತ್ತಾಯಿಸಿದರು. ಕಾ.ಎಸ್.ಬಿ.ಶಿವಶಂಕರ್ ಮತ್ತು ಕಾ. ಶಿವಕುಮಾರ್ ಸಭೆಯಲ್ಲಿ ಮಾತನಾಡಿದರು.

ವಿಜಾಪುರ

ಎಸ್.ಎಫ್.ಐ. ಮತ್ತು ಡಿ.ವೈ. ಎಫ್.ಐ. ನೇತೃತ್ವದಲ್ಲಿ ಕಾರ್ಯಕರ್ತರು ಮೆರವಣಿಗೆಯನ್ನು ನಡೆಸಿ ಜಿಲ್ಲಾಧಿಕಾರಿಗಳಿಗೆ ಪೋಲೀಸ್,ಅಧಿಕಾರಿಗಳಿಗೆ, ನಗರಸಭೆ ಕಮಿಷನರ್ ಅವರಿಗೆ ಮನವಿ ಅರ್ಪಿಸಿದರು. ಕಾರ್ಯಕ್ರಮದ ನೇತೃತ್ವವನ್ನು ಸಂಗಾತಿಗಳಾದ ಅಣ್ಣಾರಾಯ ಈಳಗೇರ, ಸದಾನಂದ, ಮನ್ಸೂರ ಸಾಬ್,ಕಲಾದಗಿ ಎ.ಆರ್.. ಕೊಡಗಿ, ಬಿ.ಡಿ.ಬಳಗಲ್, ಎಲ್.ವೈ.ಹಂದಾಳ, ಆರ್.ಸಿ. ಪಾಟೀಲ್ ವಹಿಸಿದ್ದರು.

ಸೀಟು ಶುಲ್ಕದ ವಿರುದ್ಧ ಐಕ್ಯ ಹೋರಾಟ

ಇನ್ನೂ ಕೆಲವು ಹೊಸ ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಪರವಾನಗಿ ನೀಡುವ ಸಚಿವ ಸಂಪುಟದ ಉದ್ದೇಶ ವನ್ನುಪ್ರತಿಭಟಿಸಿ ಜೂನ್25ರಂದು ವಿಧಾನಸೌಧಕ್ಕೆ ಜಂಟಿ ಪ್ರತಿಭಟನಾ ಮೆರವಣಿಗೆಯ ಮೂಲಕ ತೆರಳಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ.

ಡೊನೇಷನ್–ಕ್ಯಾಪಿಟೇಷನ್‌ಶುಲ್ಕ ಪದ್ಧತಿಯ ವಿರುದ್ಧ ರಾಜ್ಯವ್ಯಾಪಿ ಐಕ್ಯ ಚಳುವಳಿ ರೂಪಿಸಲು ಐದು ಪ್ರಮುಖ ವಿದ್ಯಾರ್ಥಿ ಸಂಘಟನೆಗಳು ನಿರ್ಧರಿಸಿವೆ. ದಿನಾಂಕ 22-6-87ರಂದು ಬೆಂಗಳೂರಿನಲ್ಲಿ ಜರುಗಿದ ಜಂಟಿ ಸಭೆಯಲ್ಲಿ ಜುಲೈ 21ರಂದು ರಾಜ್ಯಮಟ್ಟದ ಸಮಾವೇಶವೊಂದನ್ನು ಏರ್ಪಡಿಸಿ ಐಕ್ಯ ಹೋರಾಟ ಸಮಿತಿಯನ್ನು ರೂಪಿಸಲು ತೀರ್ಮಾನಿಸಲಾಗಿದೆ. 18 ಸದಸ್ಯರ ಸಿದ್ಧತಾ ಸಮಿತಿಯನ್ನು ರಚಿಸಲಾಗಿದ್ದು ಕಿರಿಯ ವೈದ್ಯರ ಸಂಘದ ಪ್ರತಿನಿಧಿ ಡಾ|| ಅಮರನಾಥ್ ಸಂಚಾಲಕರಾಗಿ ಆಯ್ಕೆಯಾಗಿದ್ದಾರೆ. ಎಸ್.ಎಫ್.ಐ., ಎ.ಐ.ಎಸ್.ಎಫ್., ಎ.ಬಿ.ವಿ.ಪಿ., ಎ.ಐ.ಡಿ.ಎಸ್.ಓ.ಮತ್ತು ಬೆಂಗಳೂರು ವೈದ್ಯಕೀಯ ಕಾಲೇಜು ವಿದ್ಯಾರ್ಥಿ ಸಂಘದ ವತಿಯಿಂದ ಅನುಕ್ರಮವಾಗಿ ಎಸ್. ಆರ್. ಆರಾಧ್ಯ, ಸಿದ್ಧಲಿಂಗಸ್ವಾಮಿ, ವಿಶ್ವೇಶ್ವರ ಹೆಗ್ಡೆ, ಡಾ|| ಮಂಜುನಾಥ್ ಹಾಗೂ ಚಂದ್ರಶೇಖರ್‌ರವರು ಸಹ ಸಂಚಾಲಕರಾಗಿ ಆಯ್ಕೆಯಾಗಿರುತ್ತಾರೆ. ಸಮಾವೇಶಕ್ಕೆ ಇತರೆ ಸಮಾನ ಧೋರಣೆಯ ಸಂಘಟನೆಗಳನ್ನು ಸಹ ಆಹ್ವಾನಿಸಿ ಐಕ್ಯ ಹೋರಾಟದ ವೇದಿಕೆಯನ್ನು ವಿಸ್ತೃತಗೊಳಿಸಿ ಕಾರ್ಯಾಚರಣೆಗೆ ಚಾಲನೆ ನೀಡಲು ಉದ್ದೇಶಿಸಲಾಗಿದೆ.

ನಿಕರಾಗುವಾದ ಕ್ರಾಂತಿಯ ವಿರುದ್ಧ ಷಡ್ಯಂತ್ರ

ರೀಗನನಿಗೆ ಮುಳುವಾಗುತ್ತಿರುವ ಇರಾನ್ ಗೇಟ್

ಸಿಹಿಯಾದ ಕೇಕ್, ಧರ್ಮ ಬೋಧಿಸುವ ಬೈಬಲ್, ಜೀವ ತೆಗೆಯುವ ಪಿಸ್ತೂಲ್ ! ಎತ್ತಣ ಮಾಮರ, ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯ ! ಎಂದು ನೀವು ಆಶ್ಚರ್ಯ ಪಡಬಹುದು. ಧರ್ಮಕ್ಕೂ ಜೀವತೆಗೆಯುವುದಕ್ಕೂ ಏಕೆ ಸಂಬಂಧವಿಲ್ಲ ಮತ್ತು ಅದನ್ನು ಜಾರಿಗೆ ತರುವವರಿಗೆ ಅದು ಸಿಹಿಯಾಗದಿರಲು ಹೇಗೆ ಸಾಧ್ಯ? ಎಂಬಂತೆ ಟೆಹರಾನ್‌ಗೆ ಅತ್ಯಂತ ಗುಪ್ತವಾಗಿ ಪ್ರಯಾಣ ಬೆಳೆಸಿದ್ದ ರಾಷ್ಟ್ರೀಯ ಭದ್ರತಾ ಮಂಡಳಿಯ ಮಾಜಿ ಸಲಹೆಗಾರ ಮ್ಯಾಕ್ ಫಾರ್ ಲೇನ್ ಹಾಗೂ ಉಪಸಲಹೆಗಾರ ಆಲಿವರ್ ನಾರ್ಥ್ ಇರಾನಿನೊಡನೆ ಕೈಕುಲುಕಿ ಸಿಹಿ, ತಿಂಡಿ, ರೀಗನ್‌ನ ಸಹಿಯಿದ್ದ ಬೈಬಲ್ ಹಾಗೂ ಪಿಸ್ತೂಲನ್ನು ತಮ್ಮ ಭೇಟಿಯ ನೆಚ್ಚಿನ ಕಾಣಿಕೆಯಾಗಿ ನೀಡಿದರು. ಅವರ ಹಿಂದೆ ಶಸ್ತ್ರಾಸ್ತ್ರಗಳನ್ನು ತುಂಬಿಕೊಂಡ ಒಂದು ವಿಮಾನವೇ ನಿಂತಿತ್ತು. ಇರಾನಿನೊಡನೆ ಕೈಕುಲುಕಿದ ಅಮೇರಿಕಾದ ಜನ ಗುಪ್ತವಾಗಿಯೇ ವಾಪಸಾದರು. ಆದರೆ ಬೆಂಕಿ ಹೊಗೆಯಾಡುವುದನ್ನು ಬಿಡಲಿಲ್ಲ.

ಇರಾನಿನೊಡನೆ ಗುಪ್ತವಾಗಿ ಮಾಡಿಕೊಂಡ ಒಪ್ಪಂದಗಳ ಬಹು ದಿನಗಳ ನಂತರ ಅದು ಸದ್ದುಮಾಡತೊಡಗಿದೆ. ಈ ಒಪ್ಪಂದದ ಬಯಲಿಗೆ ಬಿದ್ದ ಬೆನ್ನಲಿಯೇ ಇನ್ನೂ ಹಲವು ಭೀಕರ ಸಂಗತಿಗಳು ಹೊರ ಬಂದಿವೆ. ಅಮೇರಿಕಾ ನೇಯ್ದ ಬೃಹತ್ ಜಾಲ ಇಂದು ಎಲ್ಲರ ಕಣ್ಣಿಗೂ ನಿಚ್ಚಳವಾಗಿ ಕಾಣುತ್ತಿದೆ. ಈ ಜಾಲದಲ್ಲಿ ಉಸಿರು ಕಳೆದುಕೊಳ್ಳುತ್ತಿದ್ದ ನಿಕರಾಗುವಾ ಸ್ವಲ್ಪವಾದರೂ ಸಮಾಧಾನಗೊಂಡಿದೆ.

ಹೂವಿನ ಹೆಸರಲ್ಲಿ....

1986ರಲ್ಲಿ ಇಂಗ್ಲೆಂಡ್‌ನ ಅಬ್ಸರ್ವರ್ ಪತ್ರಿಕೆ "ಆಪರೇಷನ್‌ಫ್ಲವರ್" ಎಂಬ ಸುದ್ಧಿಯನ್ನು ಬಯಲು ಮಾಡಿದಾಗ ಅದು ಅಷ್ಟೇನೂ ಆಸಕ್ತಿ ಕೆರಳಿಸಿರಲಿಲ್ಲ. ಅದೇ "ಇರಾನ್ ಗೇಟ್" ಹಗರಣವೆಂದು ಈಗ ಗೊತ್ತಾಗಿದೆ. 'ನಾಳೆ ಅದು ಬೆಂಕಿಯನ್ನುಗುಳುತ್ತದೆ. ಖಂಡಿತವಾಗಿಯೂ ಅದು ನಿಮಗೆ ಇಷ್ಟವಾಗುತ್ತದೆ. ಅದು ನಿಜಕ್ಕೂ ಅತ್ಯಂತ ಉತ್ತಮ ಶಸ್ತ್ರ' ಇಸ್ರೇಲ್‌ನ ರಕ್ಷಣಾ ಮಂತ್ರಿ ಎಜರ್ ವೈಸ್‌ಮನ್ ಇರಾನಿನ ಹಸನ್‌ರವರಿಗೆ ವಿವರಿಸುತ್ತಿದ್ದರು. ಟೆಲ್ ಅವಿವ್‌ನಲ್ಲಿ ನಡೆಯುತ್ತಿದ್ದ ಈ ಗುಪ್ತ ಸಭೆಯೇ ಇಂದಿನ ಇರಾನ್ ಗೇಟ್ ಹಗರಣದ ಬೀಜವಾಗಿತ್ತು.

ಇರಾನಿನ ಷಾ ತನ್ನ ದೇಶದಲ್ಲಿ ಅಣು ಶಸ್ತ್ರಾಸ್ತ್ರಗಳನ್ನು ಪೇರಿಸಿದ್ದ ಸಾಹಸದಲ್ಲಿ ತೊಡಗಿದ್ದರು. ಇಸ್ರೇಲ್ ಇದಕ್ಕೆ ತನ್ನೆಲ್ಲಾ ಶಕ್ತಿಯನ್ನು ಧಾರೆಯರೆದಿತ್ತು. "ಆಪರೇಷನ್ ಫ್ಲವರ್" ಮುಗ್ಧ ಹೂವಿನ ಹೆಸರಲ್ಲಿ ಅದರ ಪಕಳೆಗಳನ್ನೇ ಹೊಸಕುವ ಕಾರ್ಯನಡೆದಿತ್ತು. ಟೌಫಾನಿಯಿನ್ ನೇತೃತ್ವದಲ್ಲಿ ಇರಾನ್‌ನ ಎಣ್ಣೆಯ ಬದಲಿಗೆ ಶಸ್ತ್ರಾಸ್ತ್ರ ಸಂಗ್ರಹಿಸುವ ಕೆಲಸಕ್ಕೆ ಸಹಿ ಹಾಕಲಾಯಿತು. ಇಸ್ರೇಲ್ ಮಧ್ಯಸ್ತಿಕೆ ವಹಿಸಿತು.

ನಿಕರಾಗುವಾದ ಕ್ರಾಂತಿ ರೀಗನ್ ನುಂಗಲಾಗದ ಬೆಂಕಿಯಾಗಿದೆ.

ಬುಡಕ್ಕೇ ಬೆಂಕಿ ತಗುಲಿದರೆ ಉಂಟೇನು? ಪಕ್ಕದಲ್ಲಿ ನೋಡಿದರೆ ತನ್ನ ಪರಮ ವೈರಿ ಕ್ಯೂಬ. ಈ ದೇಶಗಳು ಒಟ್ಟಾಗಿ ನಿಂತರೆ ತನಗೇ ಅಪಾಯ ಎಂದು ಬಗೆದ ರೇಗನ್ ನಿಕರಾಗುವಾವನ್ನು ಮಟ್ಟ ಹಾಕಲು ಯೋಚಿಸಿದರು. ನಿಕರಾಗುವಾದ ಬಂಡುಕೋರರ ಕಾಂಟ್ರಾಗಳಿಗೆ ರೇಗನ್ ತತ್‌ಕ್ಷಣವೇ ನೀರೆರೆಯಲು ಸಿದ್ಧರಾದರು. ಆದರೆ ಈ ಹಿಂದೆ ಅಮೇರಿಕದ ಕಾಂಗ್ರೆಸ್ ಅಂಗೀಕರಿಸಿದ್ದ ಬೋನಾಲ್ಡ್ ಅಮೆಂಡ್ ಮೆಂಟ್ ಪ್ರಕಾರ ರೀಗನ್ ನಿಕರಾಗುವಾದ ಕಾಂಟ್ರಾಗಳಿಗೆ ಸಹಾಯ ಮಾಡುವ ಹಾಗಿರಲಿಲ್ಲ. ಆಗ ನೆರವಿಗೆ ಬಂದದ್ದು ಇಸ್ರೇಲ್.

ಇಸ್ರೇಲ್‌ಗೂ ಸಹ ಇರಾನ್ ಮತ್ತು ಇರಾಕ್ ನಡುವೆ ನಡೆಯುತ್ತಿದ್ದ ಭೀಕರ ಕದನಕ್ಕೆ ತುಪ್ಪ ಎರೆಯುವುದು ಬೇಕಿತ್ತು. ಇರಾನ್‌ಗೇನಾದರೂ ಶಸ್ತ್ರಾಸ್ತ್ರ ನೀಡಿದರೆ ಅದರ ಮೂಲಕ ಇರಾನ್-ಇರಾಕ್ ಕದನ ಇನ್ನೂ ಮುಂದುವರೆಯುತ್ತದೆ. ಇಸ್ರೇಲ್‌ನ ಕೈಗಾರಿಕೆಗೆ ಪ್ರತಿಸ್ಪರ್ಧಿಯೇ ಇರುವುದಿಲ್ಲ ಜೊತೆಗೆ ಒಂದು ಅಂತರಾಷ್ಟ್ರೀಯ ಮಾರುಕಟ್ಟೆ ಸಿಗುತ್ತದೆ. ಆದರೆ ರೇಗನ್‌ರವರ ಯೋಚನೆಯೇ ಬೇರೆ ಒಂದೇ ಏಟಿಗೆ ಎರಡು ಹಕ್ಕಿ ಉರುಳಿಸುವ ತಂತ್ರ ಅಮೇರಿಕದ್ದು. ಇರಾನ್ ಶಸ್ತ್ರ ಸಹಾಯ ಮಾಡಿದರೆ ಈ ಹಿಂದೆ ಅಮೇರಿಕಾ ವಿರೋಧಿಯಾಗಿದ್ದ ಇರಾನ್ ಸ್ವಲ್ಪ ತಗ್ಗುತ್ತದೆ. ಇದರಿಂದ ಕಮ್ಯುನಿಸ್ಟ್ ರಷ್ಯಾವನ್ನು ಬಗ್ಗುಬಡಿಯಬಹುದಲ್ಲದೆ ಪಶ್ಚಿಮ ಏಷ್ಯಾದಲ್ಲಿ ಅಮೇರಿಕಗೊಂದು ಭದ್ರ ನೆಲೆ ಸಿಗುತ್ತದೆ ಎಂಬ ಯೋಚನೆ ರೀಗನ್‌ರವರದ್ದು. ಇಸ್ರೇಲ್ ಮತ್ತು ಅಮೇರಿಕಾದ ತಮ್ಮ ಲಾಭಗಳ ಯೋಚನೆಗೆ ಒಂದು ರಂಗ ಸಿದ್ಧವಾಯಿತು.

ಇರಾನ್‌ಗೆ ಶಸ್ತ್ರಗಳನ್ನು ಪಶ್ಚಿಮ ಯೂರೋಪ್ ಬಂದರುಗಳ ಮೂಲಕ ಸಾಗಿಸಲಾಯಿತು. ಅಮೇರಿಕಾದ ಕಸ್ಟಮ್ಸ್‌ನವರು ನ್ಯೂಯಾರ್ಕಿನಲ್ಲಿ ಪ. ಜರ್ಮನಿಯ ವ್ಯಾಪಾರಸ್ಥನನ್ನು ಹಿಡಿದು ಹಾಕಿದರು. ಇಸ್ರೇಲ್ ಸಹಾಯದಿಂದ ಇರಾನ್‌ಗೆ ಯುದ್ಧ ಶಸ್ತ್ರಾಸ್ತ್ರಗಳನ್ನು ಕೊಂಡೊಯ್ಯಲು ಈತ ಅಲ್ಲಿದ್ದನೆಂಬುವುದು ಬೆಳಕಿಗೆ ಬಂತು.

ಈ ಹಗರಣಕ್ಕೆ ಸಂಬಂಧಿಸಿದಂತೆ ಮೂವರು ಇಸ್ರೇಲಿಗಳೂ ಸೇರಿದಂತೆ ಐದು ಜನರನ್ನು ಬಂಧಿಸಲಾಯಿತು. ಈ ಗುಂಪಿನಲ್ಲಿ ಈ ಒಪ್ಪಂದದ ನಾಯಕನಾದ ಸ್ಯಾಮ್ಯುಯಲ್ ಇವಾನ್ ಸಹ ಸೇರಿದ್ದರು. ಬಂದೀಖಾನೆ ಸೇರಿದ ಇವಾನ್ಸ್ ಸುಮ್ಮನಿರಲಿಲ್ಲ. ಇಸ್ರೇಲ್ ಇವನ ಪರವಾಗಿ ನಿಲ್ಲದಿದ್ದರೆ ಎಲ್ಲವನ್ನು ಹೇಳುವುದಾಗಿ ಬೆದರಿಸಿದ. ಇದು ತಕ್ಷಣ ಕೆಲಸ ಮಾಡಿತು. ನನಗೂ ಈ ಶಸ್ತ್ರಾಸ್ತ್ರ ಹಗರಣಕ್ಕೂ ಏನೂ ಸಂಬಂಧ ಇಲ್ಲ ಎಂದು ಇಸ್ರೇಲ್ ಹೇಳಿತು. ಬಂಧಿತ ಸ್ಯಾಮ್ಯುಯಲ್ ಅಮೇರಿಕಾದ ಜೊತೆಗಿದ್ದ ಸಂಬಂಧ, ಇಸ್ರೇಲ್ ಸಂಬಂಧ ಎಲ್ಲವನ್ನೂ ಬಯಲುಮಾಡಿದ ಇದನ್ನು ಅಮೇರಿಕ ನೇರವಾಗಿ ಇಸ್ರೇಲ್ ಮೂತಿಗೆ ಬಳಿಯಲು ಪ್ರಯತ್ನಿಸಿತು. ಜೆರುಸ್ಲೇಮ್‌ನಲ್ಲಿ ಇರಾನ್‌ನ ಜೊತೆ ಮಾತುಕತೆ ಪ್ರಾರಂಭವಾಯಿತು. ಇಸ್ರೇಲ್ ಮಧ್ಯಸ್ತಿಕೆ ವಹಿಸಿತು. ಇಸ್ರೇಲ್‌ನ ಮೈಖೇಲ್ ರೀಪಿನ್ ಈ ಯೋಜನೆ ಹಾಕಿದರು. ಮ್ಯಾಕ್ ಫಾರ್‌ರೀನ್ ಇದನ್ನು ಒಪ್ಪಿದರು. ಇಸ್ರೇಲ್‌ಗೆ ಇರಾನ್ ಮತ್ತು ಇರಾಕ್ ನಡುವೆ ಯುದ್ಧ ನಡೆಯುವುದು ಬೇಕಿತ್ತು ಎಂದು ಹೇಳಲಾಯಿತು. ಅಮೇರಿಕಾ ಕಾಂಗ್ರೆಸ್‌ಗೆ ಇದಾವುದು ತಿಳಿಯದಂತೆ ಗುಟ್ಟಾಗಿ ಇಡಲಾಗಿತ್ತು. ಮ್ಯಾಕ್‌ಫಾರ್‌ನ್ ಮತ್ತು ರಿಚರ್ಡ ಸಕಾರ್ಡ್ ಇಬ್ಬರೂ ನಿಕರಾಗುವಾ ದಂಗೆಕೋರರಾದ ಕಾಂಟ್ರಾಗಳಿಗೆ ಸಹಾಯ ಮಾಡುವಂತೆ ಅಮೇರಿಕಾ ಸೂಚನೆ ನೀಡಿದ್ದನ್ನು ಹೇಳಿದ್ದಾರೆ. ರೇಗನ್ ಎಲ್ಲಾ ಏಜನ್ಸಿಗಳ ಮೂಲಕ ಸೆಖಾರ್ಡ್ ಕಾಂಟ್ರಾಗಳಿಗೆ ಸಹಾಯ ಮಾಡುವಂತೆ ಕೆಲಸ ಪ್ರಾರಂಭವಾಯಿತು. ನಾರ್ಥ್‌ರವರಿಗೆ ಈ ಕೆಲಸಒಪ್ಪಿಸಲಾಯಿತು. ನಂತರ ಸಿ.ಐ.ಎ. ನಿರ್ದೇಶಕ ವಿಲಿಯಂ ಕೇಸಿಯವರಿಗೆ ಈ ಹೊಣೆಗಾರಿಕೆ ನೀಡಲಾಯಿತು. ○

ಸೋವಿಯೆತ್ ದೇಶದಲ್ಲಿ ಸಮಾಜವಾದಿ ಪ್ರಜಾಪ್ರಭುತ್ವ ವಿಸ್ತಾರ ಗೊಳ್ಳುವ, ತೀವ್ರ ಕ್ರಿಯಾಶೀಲವಾಗಿ ಎಲ್ಲರೊಡನೆಯೂ ಆಡಳಿತದ ನೀತಿಗಳನ್ನು ಹಂಚಿಕೊಳ್ಳುವ ಪ್ರಯತ್ನ. ಆದರೆ ಅಮೇರಿಕದಲ್ಲಿ ಅಲ್ಲಿಯ ಸಂಸತ್ತಿನ ಎಲ್ಲಾ ವಿಧಿ ನಿಯಮವನ್ನು ಗಾಳಿಗೆ ತೂರಿ ಇಡೀ ಜನತೆಯನ್ನು ವಂಚಿಸುವ, ಮಾಡಿದ ತಪ್ಪುಗಳನ್ನು ಮುಚ್ಚಿ ಹಾಕಲು ಮತ್ತಷ್ಟು ಘೋರಪಾತಕಗಳನ್ನು ಮಾಡಲು ಹಿಂಜರಿಯದ, ಅದನ್ನು ಸಹಿಸುವ ಪ್ರಜಾಪ್ರಭುತ್ವ.

ಯಾವುದು ನಿಜವಾದ ಪ್ರಜಾಪ್ರಭುತ್ವ. ಎಂಬುದೀಗ ಇಡೀ ಜಗತ್ತಿಗೇ ತಿಳಿಯುತ್ತಿದೆ. ಶ್ವೇತಭವನದ ಒಳಗಿನ ಗಬ್ಬುನಾತ ಮೂಗಿಗೆರಾಚುತ್ತಿದೆ.

ಇರಾನ್‌ಗೇಟ್ ಆರಂಭವಾದದ್ದು ವಿಯೆಟ್ನಾಂನಲ್ಲಿ

ಇಂದು ಶ್ವೇತಭವನದ ಒಳಗಿನ ರಾಡಿಯನ್ನೆಲ್ಲಾ ಎಳೆದೆಳೆದು ಹೊರಗೆ ಹಾಕುತ್ತಿರುವ ಇರಾನ್‌ಗೇಟ್ ಎಂದು ಪ್ರಸಿದ್ಧವಾದ ಪ್ರಕರಣದ ಹಿಂದಿನ ವ್ಯಕ್ತಿಗಳು ಯಾರು? ಇವರ ಹಿನ್ನೆಲೆಯೇನು? ಇಲ್ಲಿಯವರೆವಿಗೂ ಈ ವಿಷಯದಲ್ಲಿ ಬಹಳ ಪ್ರಸಿದ್ಧರಾದವರು ಆಲಿವರ್ ನಾರ್ಥ್, ರಾಬರ್ಟ್ ಮ್ಯಾಕ್‌ಫರ್ಲೇನ್', ಪಾಯಿಂಟ್‌ಡೆಕ್ಸ್‌ಟರ್ ಮೊದಲಾದವರು. ಇವರ ಬೆನ್ನ ಹಿಂದೆ ಕೆಲಸ ಮಾಡಿದ, ಈ ಮಾರ್ಗವನ್ನೂ ಸೂಚಿಸಿದ ವ್ಯಕ್ತಿಗಳು ಅಮೇರಿಕದ ವಾಯುಪಡೆಯ ನಿವೃತ್ತ ಮೇಜರ್ ಜನರಲ್, ರಿಚರ್ಡ್ ಸೆಕಾರ್ಡ್ ಮತ್ತು ಹಿಂದಿನ ಸಿ.ಐ.ಎ. ಅಧಿಕಾರಿಗಳಾದ ಥಾಮಸ್ ಕ್ಲೈನ್ಸ್ ಮತ್ತು ಶಾಕ್ಲೆ. ಇವರೇ ಇರಾನಿಗೆ ಶಸ್ತ್ರಾಸ್ತ್ರ ಮಾರಿದ ಹಣವನ್ನು ಇಡಲು ಹಾಗೂ ನಿಕರಾಗುವಾದ ಕ್ರಾಂತಿ ವಿರೋಧಿ ಕಾಂಟ್ರಾಗಳಿಗೆ ವರ್ಗಾಯಿಸಲು ಸ್ವಿಸ್‌ಬ್ಯಾಂಕ್‌ನಲ್ಲಿ ಗುಪ್ತ ಲೆಕ್ಕವನ್ನು ಇಟ್ಟವರು, ಅದರ ಎಲ್ಲಾ ವ್ಯವಹಾರ ಮಾಡಿದವರು.

ಇಂತಹ ಯೋಜನೆಯನ್ನು ಸೂಚಿಸಿದವನು ಇರಾನ್ ಮೂಲದ ವ್ಯಾಪಾರಿ ಹಕೀಂ. ಈ ಮೂರು ಜನರ ಮೈತ್ರಿ ವಿಯೆಟ್ನಾಂ ಯುದ್ಧದಲ್ಲಿ ಅಮೇರಿಕದ ಪ್ರತಿಗಾಮಿಗಳು ನಡೆಸಿದ ಅನೇಕ ಕಾನೂನುಬಾಹಿರ ಕುಕೃತ್ಯಗಳಲ್ಲಿ ರೂಪುಗೊಂಡಿತು.

ಏರ್ ಅಮೇರಿಕಾ

ಸೆಕಾರ್ಡ್ ಕ್ಲೈನ್ಸ್, ಹಾಗೂ ಶಾಕ್ಲೆ ಸಿ.ಐ.ಎ. ನಿರ್ದೇಶನದಂತೆ 'ಏರ್ ಅಮೇರಿಕಾ' ಎಂಬ ಹೊರನೋಟಕ್ಕೆ ಖಾಸಗಿ ವಿಮಾನ ಸಂಸ್ಥೆಯಂತೆ ಕಾಣುವ ಸಂಸ್ಥೆಯನ್ನು ಆರಂಭಿಸಿದರು. ಈ ಸಂಸ್ಥೆಯ ವಿಮಾನಗಳಲ್ಲಿ ರಹಸ್ಯವಾಗಿ ಸಿ.ಐ.ಎ. ದಂಗೆಕೋರರನ್ನು ಲಾವೋಸ್ ಒಳಕ್ಕೆ ನುಗ್ಗಿಸಿದ್ದು ಇವರೇ.

ಸುಳ್ಳು ಬ್ಯಾಂಕ್

ಬರೀ ಖೋಟಾ ವಿಮಾನ ಸಂಸ್ಥೆಗಳನ್ನು ಮಾತ್ರವಲ್ಲ, ಸುಳ್ಳುಬ್ಯಾಂಕ್‌ಗಳನ್ನು ಆರಂಭಿಸಿ ಲಾವೋಸ್, ಥೈಲಂಡ್, ಬರ್ಮಾ ದೇಶಗಳ ಗಡಿಗಳಲ್ಲಿ ಬೆಳೆಯುವ ಅಫೀಮನ್ನು ಬೆಳೆಯುವವರಿಗೆ ಕೊಳ್ಳುವವರಿಗೆ ಹಣ ನೀಡಿ ಬಂದ ಲಾಭವನ್ನು ಸಿ.ಐ.ಎ.ಗೆ ಅದರ ಗುಪ್ತ ವಿಯೆಟ್ನಾಂ ವಿರೋಧಿ ವ್ಯವಹಾರಗಳಗಾಗಿ ಒದಗಿಸಲಾಗಿದೆ.

ಅಂಗೋಲಾದ ಪ್ರತಿ ಕ್ರಾಂತಿಕಾರಿಗಳಿಗೆ 1976ರಲ್ಲಿ ದ. ಆಫ್ರಿಕಾದ ವರ್ಣದ್ವೇಷಿ ಸರ್ಕಾರಕ್ಕೆ ಜಿಂಬಾಬ್ವೆಯ ಕ್ರಾಂತಿಗೆ ಮುನ್ನ ಅಲ್ಲಿಯ ಬಿಳಿ ಸರ್ಕಾರಕ್ಕೂ ಶಸ್ತ್ರಾಸ್ತ್ರ ಒದಗಿಸಿತು ಈ ಬ್ಯಾಂಕ್. ಇಲ್ಲಿಂದ ಆರಂಭವಾದ ಈ ಹಗಲು ದರೋಡೆಕಾರರ ಬಾಂಧವ್ಯ ನಾನಾ ವ್ಯವಹಾರಗಳಲ್ಲಿ ಗರಿಕಟ್ಟಿ ಕೊಂಡಿತು.

70ರಲ್ಲೇ ಇರಾನ್ ಗೇಟ್ ಆರಂಭ

ಈ ಮೂರು ಜನರ ಜೊತೆಗೆ ಹಕೀಂ ಎಂಬ ಇರಾನಿ ಸೇರಿಕೊಂಡಿದ್ದು ಇಂದು ನಿನ್ನೆಯಲ್ಲ. ಇರಾನ್‌ಗೇಟ್ ಎಂಬ ಅವ್ಯವಹಾರದ ಮೂಲವೂ ಎಲ್ಲ ಪತ್ರಿಕೆಗಳಲ್ಲಿ ಪ್ರಚಾರವಾದಂತೆ ಕೇವಲ ಒಂದೆರಡು ವರ್ಷದಲ್ಲ.

ನಿಕರಾಗುವಾದ ಕ್ರಾಂತಿಯಾಗುವುದಕ್ಕೆ ಮೊದಲೇ 1970ರ ದಶಕದ ಮಧ್ಯದಲ್ಲಿಯೇ ಹಕೀಂ ಅಮೇರಿಕದ ಸೇನಾಪಡೆಗಳ ಕೇಂದ್ರ ಪೆಂಟಗನ್‌ನಿಂದ

[6ನೇ ಪುಟ ನೋಡಿ]

2 ವರ್ಷಗಳ ಹಿಂದೆ ಲೇಬನಾನಿನ ವಾರಪತ್ರಿಕೆಯೊಂದರಲ್ಲಿ ಹಠಾತ್ತನೆ ಆಸ್ಫೋಟಗೊಂಡ ಸುದ್ದಿ ಇಂದು ರೀಗನನ ಆಳ್ವಿಕೆಗೆ, ಇಡೀ ಅಮೇರಿಕಾದ ಪ್ರಜಾಸತ್ತೆಗೆ ಮಸಿಬಳಿದಿದೆ. ವಿಮಾನ ಸಿಬ್ಬಂದಿಯಂತೆ ಕಳ್ಳವೇಷ ಧರಿಸಿದ್ದ, ವಾಷಿಂಗ್ಟನ್‌ನಲ್ಲಿ ಅಧ್ಯಕ್ಷ, ಉಪಾಧ್ಯಕ್ಷರನ್ನು ಬಿಟ್ಟರೆ, ಕೆಲವೊಮ್ಮೆ ಉಪಾಧ್ಯಕ್ಷರಿಗಿಂತಲೂ ಬಲಾಢ್ಯ ಹುದ್ದೆಯಾದ ರಾಷ್ಟ್ರೀಯ ರಕ್ಷಣಾ ಸಲಹೆಗಾರ ಮ್ಯಾಕ್‌ಫರ್ಲೆನ್, ಇರಾನಿಗೆ ಭೇಟಿ ನೀಡಿದ.

ಇರಾನಿನಲ್ಲಿ ಖೊಮೈನಿಯ ಆಡಳಿತದಲ್ಲಿ ಅಮೇರಿಕದ ಜೊತೆ ಸಂಧಾನ ನಡೆಸಿ ಅದರ ಮಿತ್ರತ್ವಗಳಿಸಬೇಕೆನ್ನುವವರೊಡನೆ ಮಾತನಾಡಲು ಬಂದ ಈ ಛದ್ಮವೇಷಧಾರಿ ತನ್ನ ಜೊತೆಯಲ್ಲಿ ಕೀಲಿಯಾಕಾರದಲ್ಲಿ ಮಾಡಿದ್ದ ಕೇಕ್ ಹಾಗೂ ರೀಗನನೇ ಸ್ವತಃ ಸಹಿಮಾಡಿದ್ದ ಬೈಬಲ್, ಹಾಗೂ ಇಡೀ ವಿಮಾನದ ತುಂಬಾ ತುಂಬಿದ್ದ ಶಸ್ತ್ರಾಸ್ತ್ರಗಳನ್ನು ಒಯ್ದಿದ್ದ.

ಆಕಸ್ಮಿಕವಲ್ಲ, 'ರಾಂಬೊ' ರಾಜಕೀಯದ ಅನಿವಾರ್ಯ ಅಂಗ

ಇರಾನ್-ಕಾಂಟ್ರಾ ಹಗರಣ, ಅಮೇರಿಕದ ರಾಜಕೀಯದಲ್ಲೇ ಏಕೆ ಅಂತರಾಷ್ಟ್ರೀಯ ಗುತ್ತೇದಾರಿ ಬೂರ್ಜ್ವಾ ವರ್ಗದಲ್ಲೇ ಹಿಂದೆಂದಿಗಿಂತಲೂ ತೀವ್ರವಾದ ರಾಜಕೀಯ ಬಿಕ್ಕಟ್ಟು ಸೃಷ್ಟಿಸಿದೆ. ಸಾರ್ವಜನಿಕವಾಗಿ ಭಯೋತ್ಪಾದಕ ದೇಶವೆಂದು ಹೀಗಳೆದಿದ್ದ ಇರಾನ್ ನಾಯಕರ ಜೊತೆಗೆ ಒತ್ತೆಯಾಳುಗಳನ್ನು ಬಿಡಿಸಲು ಶಸ್ತ್ರಾಸ್ತ್ರವನ್ನು ಒತ್ತೆಯಾಗಿಡುವ ಇಬ್ಬಂದಿತನ ಅಮೇರಿಕ ಲೋಕ ಸಭೆ ಕಾಂಗ್ರೆಸ್‌ನಿಂದ ಮಾತ್ರವಲ್ಲ. ಸಂಬಂಧಪಟ್ಟ ಸಚಿವರಿಂದಲೂ ಇಡೀ ಕಾರ್ಯಾಚರಣೆಯನ್ನು ಗುಪ್ತವಾಗಿಟ್ಟಿರುವುದು ರೇಗನ್‌ರ ವರ್ಚಸ್ಸನ್ನು ಬಹಳಷ್ಟು ಇಳಿಸಿದೆ. ರಾಜಕೀಯ ವಿವಾದಕ್ಕೆ ಕಾರಣವಾಗಿದೆ. ಕಾಂಗ್ರೆಸ್ ಹಾಗೂ ಅಧ್ಯಕ್ಷರ ನಡುವೆ ತಿಕ್ಕಾಟಕ್ಕೆ ಎಡೆ ಮಾಡಿಕೊಟ್ಟಿದೆ. ತನ್ನ 'ರಾಂಬೊ' ವಿದೇಶಿ ನೀತಿಯ ಬಗ್ಗೆ ರೇಗನ್ ಅಮೇರಿಕದಲ್ಲಿ ಸಾಧಿಸಿದ್ದ 'ಸಾರ್ವತ್ರಿಕ ರಾಜಕೀಯ ಒಮ್ಮತ'ಕ್ಕೆ ತೀವ್ರ ಧಕ್ಕೆ ತಂದಿದೆ.

ಬದಲಾಗುತ್ತಿರುವ ರಾಜಕೀಯ ಪ್ರತಿಕ್ರಿಯೆ

ಹಗರಣದ ಮೊದಲ ಘಟ್ಟದಲ್ಲೇ ರೇಗನ್ ಆಡಳಿತ ಇಡೀ ಕಾರ್ಯಾಚರಣೆ ಬಗ್ಗೆ ಗೊತ್ತೇ ಇರಲಿಲ್ಲ ಎಂದು ಬಿಂಬಿಸಲು ಪ್ರಯತ್ನಿಸಿತು. ಆದರೆ ಹೊರಬಿದ್ದ ಸಂಗತಿಗಳು ಹೆಚ್ಚೆಚ್ಚು ಆತಂಕಕಾರಿಯಾಗುತ್ತಾ ಹೋದಂತೆ ರೇಗನ್ ತಾನೇ ಈ ಬಗ್ಗೆ ವಿಚಾರಣೆ ನಡೆಸಲು 'ಟವರ್ ಕಮಿಶನ್' ನೇಮಿಸಿದರು. ಟವರ್ ಕಮಿಶನ್ ರೇಗನ್ನರ ಪಾತ್ರವನ್ನು ಮುಚ್ಚಿಟ್ಟು, ಇತರ ಆಡಳಿತದ ಅಧಿಕಾರಿಗಳನ್ನು ಬಲಿಪಶು ಮಾಡಲು ಪ್ರಯತ್ನಿಸಿತು. ಹಾಗೇನೇ ಕಾಂಗ್ರೆಸ್ ಈ ಹಗರಣದ ಆಳಕ್ಕೆ ಇಳಿಯದಂತೆ, ತಾನೆ ಕೂಲಂಕುಷ ವಿಚಾರಣೆ ನಡೆಸುತ್ತಿದೆ ಎಂಬ ಭಾವನೆ ತರಲು ಟವರ್ ಕಮಿಶನ್, ಯತ್ನಿಸಿತು. ಇದೂ ವಿಫಲವಾಯಿತು.

ಕಾಂಗ್ರೆಸ್ ಸಮಿತಿಯ ಮುಂದೆ ಸಾಕ್ಷ್ಯಗಳು ಬರುತ್ತಾ, ರೇಗನ್ ಪಾತ್ರ ಬಯಲಾಗಲೂ ಆರಂಭವಾದಾಗ ರೇಗನ್ ಆಡಳಿತ ತನ್ನ ಧೋರಣೆ ಬದಲಾಯಿಸಿದೆ. ಇರಾನ್-ಕಾಂಟ್ರಾ ಕಾರ್ಯಾಚರಣೆಯನ್ನು ಸಮರ್ಥಿಸುತ್ತಾ, ಕಾಂಗ್ರೆಸ್‌ನ್ನು ರಾಜಕೀಯವಾಗಿ ಎದುರಿಸಲು ನಿರ್ಧರಿಸಿದೆ. ಕಾನೂನು ಅಂಶಗಳ ಮೇಲೆ ಒತ್ತು ಬಿದ್ದರೆ ಇನ್ನಷ್ಟು ಪೇಚಿಗೆ ಸಿಲುಕುವ ಸಾಧ್ಯತೆ ಇರುವುದರಿಂದ ರೇಗನ್ ಆಡಳಿತ ಈ ರೀತಿ ನಿರ್ಧರಿಸಿದಂತಿದೆ. ಬೋಲೆಂಡ್ ತಿದ್ದುಪಡಿ (ಕಾಂಟ್ರಾಗಳಿಗೆ ಧನಸಹಾಯದ ಮೇಲೆ ಕಾಂಗ್ರೆಸ್ ನಿಷೇಧ) ಅಥವಾ ಕಾಂಗ್ರೆಸ್‌ನ ಯಾವುದೇ ಕಟ್ಟುಪಾಡುಗಳಿಗೆ ಅಧ್ಯಕ್ಷ ಬದ್ಧನಾಗಿರಬೇಕಿಲ್ಲ. ವಿದೇಶಿ ನೀತಿಯನ್ನು ರೂಪಿಸಿ, ಜಾರಿಗೊಳಿಸುವುದರಲ್ಲಿ ಅಧ್ಯಕ್ಷರಿಗೆ ಪೂರ್ಣ ಅಧಿಕಾರವಿದೆ ಎಂದು ಶ್ವೇತಭವನದ ವಕ್ತಾರರು ಹೇಳಲಾರಂಭಿಸಿರುವುದು ಕಾಂಗ್ರೆಸ್‌ಗೆ (ಲೋಕ ಸಭೆ) ನೇರ ಸವಾಲು. ಬೋಲೆಂಡ್ ತಿದ್ದುಪಡಿ ಬೇಹುಗಾರಿಕೆ ಸಂಸ್ಥೆಗಳಿಗೆ ಮಾತ್ರ ಅನ್ವಯವಾಗುತ್ತದೆ. ಆದ್ದರಿಂದ ಈ ಕಾರ್ಯಾಚರಣೆಯಲ್ಲಿ ಭಾಗ ವಹಿಸಿದ ಅಧ್ಯಕ್ಷರಿಗಾಗಲಿ, ರಾಷ್ಟ್ರೀಯ ಭದ್ರತಾ ಮಂಡಳಿಯ ಸದಸ್ಯರಿಗಾಗಲಿ ಇದು ಅನ್ವಯವಾಗುವುದಿಲ್ಲ ಎಂಬುದೂ ಅವರ ವಾದ. ಇನ್ನೂ ಬಾಯಿ ಬಿಡದಿರುವ ಮುಖ್ಯ ಸಾಕ್ಷಿಗಳು ಏನೂ ಹೇಳದಂತೆ ರಾಜಕೀಯ ಒತ್ತಡ ತರುವುದೂ ಈ ಆಕ್ರಮಣಾತ್ಮಕ ಪ್ರತಿಕ್ರಿಯೆಯ ಉದ್ದೇಶವಾಗಿರಬೇಕು. ಕಾಂಗ್ರೆಸ್ ಜತೆ ತಿಕ್ಕಾಟಕ್ಕಿಳಿದು ಸಂವೈಧಾನಿಕ ಬಿಕ್ಕಟ್ಟು ಸೃಷ್ಟಿಸುವ ಮೂಲಕ ಕಾಂಗ್ರೆಸ್‌ನ್ನು ಬದಿಗೊತ್ತಿ, ಜನರಿಂದ ತನ್ನ ವಿದೇಶಿ ನೀತಿಗೆ ರಾಜಕೀಯ ಬೆಂಬಲ [ಯಥಾಪ್ರಕಾರ 'ಕೆಂಪು ಅಪಾಯ' ದ ಗಾಬರಿ ಎಬ್ಬಿಸಿ] ದೊರಕಿಸಲು ರೇಗನ್ ಜನರೊಂದಿಗಿರುವ ತನ್ನ ಬಗ್ಗೆ ಇರುವ ಎಲ್ಲಾ ಪ್ರೀತಿಯನ್ನು ಪಣಕ್ಕಿಟ್ಟಿರುವುದು ಈ ಪ್ರತಿಕ್ರಿಯೆಯ ಭಾಗ. ಆದರೆ ಈ ಎರಡರಲ್ಲೂ ಸಫಲವಾಗಿರುವುದು ಅನುಮಾನಾಸ್ಪದ.

ಕಾಂಟ್ರಾ ಕಾರ್ಯಾಚರಣೆ ಮುಂದುವರಿಕೆ

ನಿಕರಾಗುವಾದ ವಿರುದ್ಧ ಕಾಂಟ್ರಾ ಕಾರ್ಯಾಚರಣೆಯನ್ನು ಇನ್ನಷ್ಟು ಜೋರಾಗಿ ಮುಂದುವರಿಸುವುದು ಈ ಹೊಸ ಧೋರಣೆಯ ದ್ಯೋತಕ. ಕಾಂಗ್ರೆಸ್ 105 ಮಿಲಿಯ ಡಾಲರ್ ಕಾಂಟ್ರಾಗಳಿಗೆ ಧನಸಹಾಯ ಮಂಜೂರು ಮಾಡುವಂತೆ ಒತ್ತಾಯ ತರಲಾಗುತ್ತಿದೆ. ಹೊಂಡುರಾಸಗೆ ಇನ್ನಷ್ಟು ಆಧುನಿಕ ಶಸ್ತ್ರಾಸ್ತ್ರಗಳ ಪೂರೈಕೆ [ಗಲಭೆ ಇರುವ ಪ್ರದೇಶದಲ್ಲಿ ಇಂತಹ ಪೂರೈಕೆ ಮಾಡುವುದಿಲ್ಲ ಹಿಂದಿನ ನೀತಿ ಬದಲಾಯಿಸಿ], ಕಾಂಟ್ರಾಗಳ ರಾಜಕೀಯ ಸಂಘಟನೆಗೆ ಬೆಂಬಲ ಈ ನೀತಿಯ ಇತರ ಅವತಾರಗಳು.

ಈ ಮೂಲಕ, ಇರಾನ್-ಕಾಂಟ್ರಾ ಬಿಕ್ಕಟ್ಟಿದ್ದರೂ ಅಂತರಾಷ್ಟ್ರೀಯ ಭಯೋತ್ಪಾದಕತೆ ಮತ್ತು ಪ್ರತಿ-ಕ್ರಾಂತಿಗಳನ್ನು ಬಟ್ಟಾಬಯಲು ಬೆಂಬಲಿಸುವ ತನ್ನ 'ರಾಂಬೊ' ವಿದೇಶ ನೀತಿಯಲ್ಲಿ ಬದಲಾವಣೆಯಾಗುವುದಿಲ್ಲ ಎಂದು ಕಾಂಗ್ರೆಸ್‌ಗೆ, ಅಮೇರಿಕನ್ ಮತ್ತು ವಿಶ್ವದ ಜನತೆಗೆ ನೋಟೀಸು ಕೊಟ್ಟಿದ್ದಾರೆ. ಈ ಮೂಲಕ ಅಂತರಾಷ್ಟ್ರೀಯ ಗುತ್ತೇದಾರಿ ಬೂರ್ಜ್ವಾ ವರ್ಗ ಮತ್ತು ಅದರ ಸಮರ್ಥಕರಿಗೂ ಬೆಂಬಲಿಗರಿಗೂ, ಈ ವರ್ಗದ ಅಗತ್ಯಕ್ಕಾಗಿ ತನ್ನ ಅಳಿದುಳಿದ ವರ್ಚಸ್ಸು, ಅಧ್ಯಕ್ಷ ಅವಧಿಯನ್ನು ಒತ್ತೆ ಇಡಲು ತಯಾರು ಎಂದು ತೋರಿಸಿದ್ದಾರೆ.

ಇದಕ್ಕೆ ವಿರುದ್ಧವಾಗಿ ಬೂರ್ಜ್ವಾ ವರ್ಗದ ಪ್ರತಿನಿಧಿಗಳು ಧೋರಣೆ ಅಮೇರಿಕನ್ ಪ್ರಜಾಸತ್ತತೆಯನ್ನು ಕಾಪಾಡುವುದರಲ್ಲಿ ಇಷ್ಟೇ ತೀವ್ರವಾದ ಕಾಳಜಿಯನ್ನು ತೋರಿಸಿಲ್ಲ. ಅತ್ಯಂತ ರೇಗನ್ ವಿರೋಧಿ ಡೆಮೋಕ್ರಾಟ್ ಸೆನೆಟರ್‌ಗಳು 'ರಾಂಬೊ' ವಿದೇಶ ನೀತಿಯನ್ನು ತೀವ್ರವಾಗಿ ವಿರೋಧಿಸುವುದಿಲ್ಲ. ಕಟು ಟೀಕೆ ಮಾಡುವ ಗುತ್ತೆದಾರಿ ಪತ್ರಿಕೆಗಳು, ಅದರ ಜತೆಗೆ ನಾವು ಇನ್ನೊಂದು ವಿಫಲ ಅಧ್ಯಕ್ಷರನ್ನು ನೋಡಲು ತಯಾರಿಲ್ಲ, ಎಂದು ತಮ್ಮ 'ವರ್ಗ ಸಹಾನುಭೂತಿ' ತೋರಿಸುತ್ತಾರೆ.

ಆಕಸ್ಮಿಕವಲ್ಲ, ಅನಿವಾರ್ಯ ಅಂಗ

ಮೊದಲಿನಿಂದಲೂ ನಿಕರಾಗುವಾ ವಿರುದ್ಧ ಈ ಕಾರ್ಯಾಚರಣೆಯನ್ನು ಸಾಧ್ಯವಾದಷ್ಟು ಖಾಸಗೀ ಮೂಲಗಳಿಂದ ಸಂಪರ್ಕದ ಮೂಲಕ ನಡೆಸಿರುವುದು ಅಧ್ಯಕ್ಷರನ್ನು ಸ್ವಲ್ಪಮಟ್ಟಿಗೆ ಕಾರ್ಯಾಚರಣೆಯಿಂದ ದೂರವಿರುವಂತೆ ತೋರಿಸಿರುವುದು ಕಂಡು ಬರುತ್ತದೆ. ಈ ರೀತಿ ಗುಪ್ತಕಾರ್ಯಾಚರಣೆ ಶಸ್ತ್ರಾಸ್ತ್ರ ಮಾರಾಟ, ಈ ಕಪ್ಪು ಬಣ್ಣವನ್ನು ಬಿಳಿ ಮಾಡಲು 'ಖಾಸಗಿ' ಸಂಘಟನೆಗಳ ಬಳಕೆ ಕೊನೆಗೆ ಸಾಮ್ರಾಜ್ಯಶಾಹಿ ಮಿತ್ರರಿಗೆ ಈ ಹಣದ ವರ್ಗಾವಣೆ ಇದು ಮೊದಲ ಬಾರಿ ಅಲ್ಲ. ವಿಯೆಟ್ನಾಂ ಯುದ್ಧದ ಸಮಯದಲ್ಲಿ ಇಂಡೋ-ಚೀನಾದಲ್ಲಿ ಇಂತಹ ಎಷ್ಟೊ ಗುಪ್ತ ಕಾರ್ಯಾಚರಣೆಗಳು ಬಯಲಿಗೆ ಬಂದಿವೆ. ಇರಾನ್ ಕಾಂಟ್ರಾದಲ್ಲಿ ಭಾಗವಹಿಸಿದ . ಜನರಲ್ ಸೆಕಾರ್ಡ ಹಾಗೂ ಏರ್ ಅಮೇರಿಕ ಎಂಬ 'ಖಾಸಗಿ, ವಿಮಾನ ಸಂಸ್ಥೆ ಇಂಡೋಚೀನಾದಲ್ಲೂ ಇದೇ ಪಾತ್ರ ವಹಿಸಿದ್ದಾರೆ. ಆದ್ದರಿಂದ ಇದು ಒಂದು ಆಕಸ್ಮಿಕವಲ್ಲ, ಸಾಮ್ರಾಜ್ಯಶಾಹಿ ವಿದೇಶಿ ನೀತಿಯ ಪ್ರಜ್ಞಾಪೂರ್ವಕ ನೀತಿ ಎಂಬುದು ಸ್ಪಷ್ಟ. ಅಂತೆಯೇ ರೇಗನ್‌ನ ವೈಯುಕ್ತಿಕ ಐಲು ತನವೂ ಇದಕ್ಕೆ ಕಾರಣವಲ್ಲ.

ದಿನೇ ದಿನೇ ಬಿಕ್ಕಟ್ಟಿನಿಂದ ಬಿಕ್ಕಟ್ಟಿಗೆ ಹೋಗುತ್ತಿರುವ ಗುತ್ತೇದಾರಿ ಬಂಡವಾಳಶಾಹಿ ತನ್ನ ಹಿತಾಸಕ್ತಿ ಕಾಪಾಡಲು ಇಡೀ ಜಗತ್ತಿನಲ್ಲಿ ಭಯೋತ್ಪಾದಕತೆ ನಡೆಸುವುದು ಅನಿವಾರ್ಯವಾಗಿದೆ. ಲೆಬನಾನ್‌ನಲ್ಲಿ ಅಮೇರಿಕ ಒತ್ತೆಯಾಳುಗಳ ಪ್ರಕರಣದಂತಹದು ಅದಕ್ಕೆ ಅನಿವಾರ್ಯ ಪ್ರತಿಕ್ರಿಯೆ. ಸಾಮ್ರಾಜ್ಯಶಾಹಿಗೆ ಅದರ ದಿನೇ ದಿನೇ ತೀವ್ರವಾಗುತ್ತಿರುವ ಅಂತರಾಷ್ಟ್ರೀಯ ಸಮಸ್ಯೆಗಳನ್ನು ಹೆಚ್ಚೆಚ್ಚು ವೇಗವಾಗಿ ನಿರ್ವಹಿಸುವ ಕೇಂದ್ರೀಕೃತ ಅಧಿಕಾರಶಾಹಿ ಅಗತ್ಯವಿವೆ. ರೇಗನರ ಅಧಿಕಾರಶಾಹಿ ಪ್ರವೃತ್ತಿ, ಆಕ್ರಮಣಾತ್ಮಕ ಧೋರಣೆ ಈ ಅಗತ್ಯವನ್ನು ಭರ್ತಿಮಾಡುತ್ತಿದೆ.

ನಿಕರಾಗುವ ಸರ್ಕಾರವ ಕೂದಲು ಕೊಂಕಿಸಲೂ ಅಮೇರಿಕನ್ ಬೆಂಬಲಿತ ಕಾಂಟ್ರಾಗಳಿಗೆ ಸಾಧ್ಯವಾಗಿಲ್ಲ ಎಂಬುದು ಅಂತಿಮವಾಗಿ ಇಂತಹ ನೀತಿಗೆ ಸಾಮ್ರಾಜ್ಯಶಾಹಿ ವಿರೋಧಿ ಜನತೆ ಉತ್ತರ ನೀಡಬಲ್ಲದು ಎಂದು ತೋರಿಸುತ್ತದೆ. ಇದು ಇರಾನ್ ಕಾಂಟ್ರಾ ಹಗರಣದ ರಾಜಕೀಯ ಪಾಠ.

> **ರೇಗನ್ ಉವಾಚ-1**
>
> "ಒತ್ತೆಯಾಳುಗಳಿಗಾಗಿ ಶಸ್ತ್ರಾಸ್ತ್ರ ವಿನಿಮಯಕ್ಕೆ ನಾನು ತೊಡಗಲಿಲ್ಲ ಎಂದು ಅಮೇರಿಕದ ಜನತೆಗೆ ನಾನು ಹೇಳಿದೆ. ನನ್ನ ಹೃದಯ ಮತ್ತು ಇಂಗಿತ ಇದು ನಿಜ ಎಂದು ಈಗಲೂ ನನಗೆ ಹೇಳುತ್ತಿದೆ,ಆದರೆ ನಿಜಸಂಗತಿ ಮತ್ತು ಸಾಕ್ಷ್ಯಾಧಾರಗಳು ಇದು ನಿಜವಲ್ಲ ಎನ್ನುತ್ತಿವೆ"
>
> -ಟವರ್ ಕಮಿಶನ್‌ವರದಿ ಬಿಡುಗಡೆಯಾದ ನಂತರ (ಮಾರ್ಚ್ 87 ಆರಂಭ)

> **ರೇಗನ್ ಉವಾಚ-2**
>
> ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಗೆ ಹೋರಾಡುತ್ತಿರುವ ಕಾಂಟ್ರಾಗಳ ವಿಷಯ.... ಇಲ್ಲಿ ನನಗೆ ಹೇಳುವ ಪ್ರಶ್ನೆ ಉದ್ಭವಿಸುವುದೇ ಇಲ್ಲ. ನಿಜವಾಗಿ ಹೇಳುವುದಾದರೆ ಈ ಬಗ್ಗೆ ನನಗೆ ಗೊತ್ತಿತ್ತು ಹಲವು ವರ್ಷಗಳಿಂದ.... ಸ್ವಾತಂತ್ರ್ಯ ಹೋರಾಟಗಾರರಿಗೆ ಬೆಂಬಲ ಕೊಡುವುದರಲ್ಲಿ ನಾನು ಭಾಗಿಯಾಗಿದ್ದೆ.... ಈ ವಿಚಾರ ನನ್ನಿಂದಲೇ ಆರಂಭವಾಗಿದ್ದು"
>
> -ಪತ್ರಿಕಾ ವರದಿಗಾರರನ್ನು ಕುರಿತು (ಮೇ 15) ಭಾಷಣ.

ಟವರ್ ಆಯೋಗ

ಮುಚ್ಚಿ ಹಾಕುವ ಪ್ರಯತ್ನ

ಮಾಜಿ ಸೆನೆಟರ್ ಟವರ್ ನಾಯಕತ್ವದ ಆಯೋಗ ಅಧ್ಯಕ್ಷ ರೇಗನರಿಂದಲೇ ಇರಾನ್‌ಕಾಂಟ್ರಾ ಹಗರಣದ ವಿಷಯದಲ್ಲಿ ಅಮೇರಿಕದ ಜನರಲ್ಲಿ ಮೂಡಿದ್ದ ಸಂದೇಹ ನಿವಾರಿಸಲು ನೇಮಿಸಲ್ಪಟ್ಟಿತ್ತು. ನಮ್ಮ ದೇಶದಲ್ಲಿ ಇಂತಹ ಆಯೋಗಗಳು ನೋಡಿಲ್ಲವೆ. ಅಧ್ಯಕ್ಷರ ಆಡಳಿತ ಯಂತ್ರದಲ್ಲಿ [ಅಧ್ಯಕ್ಷರನ್ನೂ ಸೇರಿ] ಯಾರ್ಯಾರು ಇರಾನ್ ಕಾಂಟ್ರಾ ಹಗರಣದಲ್ಲಿ ಶಸ್ತ್ರಾಸ್ತ್ರ ಹಣ ಸರಬರಾಜನ್ನು ಯೋಚಿಸಿದರು ? ಯಾರ್ಯಾರು ಇದನ್ನು ಮಂಜೂರು ಮಾಡಿದರು ? ಜಾರಿ ಮಾಡಿದರು ? ಎಂಬುದನ್ನು ನಿರ್ಧರಿಸುವುದು ಈ ಆಯೋಗದ ಕೆಲಸವಾಗಿತ್ತು.

ಮುಖ್ಯವಾಗಿ ಅಮೇರಿಕದ ರಾಷ್ಟ್ರೀಯ ಭದ್ರತಾ ಮಂಡಳಿಯ ಪಾತ್ರದ ಬಗ್ಗೆ ವಿಚಾರಣೆ ನಡೆಸಿದ ಆಯೋಗ, ರೇಗನ್ ವೈಯಕ್ತಿಕವಾಗಿ ಬಹುಶಃ ಇದರಲ್ಲಿಭಾಗಿಯಾಗಿಲ್ಲ ಎಂಬ ತೀರ್ಮಾನಕ್ಕೆ ಬಂತು. ಆದರೆ ರೇಗನ್ ಆಡಳಿತ ಯಂತ್ರ ಹುಚ್ಚು ಹುಚ್ಚಾಗಿ ಆಡುತ್ತಿದೆ ಅದರಲ್ಲೂ ಅಧ್ಯಕ್ಷೀಯ ಸಿಬ್ಬಂದಿ ಮುಖ್ಯಸ್ಥ ರೋನಾಲ್ಡ್ ರೇಗನ್ ತನ್ನ ಅಧಿಕಾರ ಮೀರಿ ವರ್ತಿಸಿದ್ದಾರೆ ಎಂದಿದೆ. ಆದರೆ ಇರಾನ್ ಕಾಂಟ್ರಾ ಹಗರಣದ ಸಂಬಂಧದಲ್ಲಿ ಹೊರಬಂದಿರುವ ಹಲವು ಕುತೂಹಲಕಾರಿ ವಿಚಿತ್ರ ಸಂಗತಿಗಳ ಬಗ್ಗೆ ಆಯೋಗ ಯಾವುದೇ ವಿಚಾರಣೆ ನಡೆಸಲಿಲ್ಲ. ಹಗರಣದಲ್ಲಿ ಇಸ್ರೇಲಿನ ಪಾತ್ರ, ಖಾಸಗಿ ಬಲಪಂಥೀ ಸಂಘಟನೆಗಳ ಸಂಬಂಧ ಇತ್ಯಾದಿ ಬಗ್ಗೆ ಟವರ್ ಆಯೋಗದ ವರದಿ ಮೌನವಾಗಿದೆ. ಅಧ್ಯಕ್ಷರ ವೈಯಕ್ತಿಕ ಪಾತ್ರವನ್ನು ನಿರಾಕರಿಸಿ, ಹಗರಣ ಮುಚ್ಚಿ ಹಾಕುವ ಒಂದೇ ಉದ್ದೇಶ ಈ ಆಯೋಗಕ್ಕೆ ಇದ್ದಂತೆ ಇದೆ. ಕಾಣುವ ಬರೆ ಸಂಗತಿಗಳಿಂದ ಇವುಗಳ ಮಧ್ಯೆಹುದುಗಿ ಹೋಗಿದೆ.

ಹಗರಣದಲ್ಲಿ ರೇಗನ್ ಶಾಮಿಲು ಬಯಲು

ಮೇ ಮಧ್ಯದಲ್ಲಿ ಆರಂಭವಾದ ಕಾಂಗ್ರೆಸ್‌ನ (ಅಮೇರಿಕದ ಸಂಸತ್ತು) ಸಮಿತಿಯ ಮುಂದೆ ಬಂದಿರುವ ಸಾಕ್ಷಗಳು, ಕಾಂಟ್ರಾಕ್ಕೆ ಧನ ಸಹಾಯ ಮಾಡುವ ಕಾನೂನು ಬಾಹಿರ ಪಿತೂರಿ ಬಗ್ಗೆ ಅಧ್ಯಕ್ಷ ರೇಗನ್‌ಗೆ ಗೊತ್ತಿತ್ತು. ಮಾತ್ರವಲ್ಲ, ಅವರೇ ಈ ಪಿತೂರಿಯ ಕೇಂದ್ರ- ಎಂದು ಬಯಲು ಮಾಡಿವೆ. ಹಗರಣದ ಮುಖ್ಯ ಪಾತ್ರಧಾರಿಗಳು (ಪ್ವೊಂಟ್‌ಡೆಕ್ಸರ್ ಮತ್ತು ನಾರ್ಥ್) ಸಾಕ್ಷ ನೀಡಲು ನಿರಾಕರಿಸಿದ್ದಾರೆ. ಆದರೆ ಮಾಜಿ ರಾಷ್ಟ್ರೀಯ ಭದ್ರತಾ ಸಲಹಾಗಾರ ರಾಬರ್ಟ್ ಮೆಕ್ ಫಾರ್ಲೆನ್ ಮತ್ತು ಮಾಜಿ ವಾಯು ಸೇನಾ ಜನರಲ್ ರಿಚರ್ಡ್ ಸೆಕಾರ್ಡ್‌ಕ್ಕೆ 85-86 ರ ಅವಧಿಯಲ್ಲಿ ಕಾಂಗ್ರೆಸ್ ನಿಷೇಧ ಉಲ್ಲಂಘಿಸಿ, ಕಾಂಟ್ರಾಗಳಿಗೆ ಸಹಾಯ ಮಾಡುವಲ್ಲಿ ರೇಗನ್ ಆಡಳಿತ ಸಂಪೂರ್ಣ ಶಾಮಿಲಾಗಿರುವುದನ್ನು, ಸಂಪೂರ್ಣ ವಿವರಗಳ ಜತೆ ಕಾಂಗ್ರೆಸ್ ಸಮಿತಿಗೆ ನೀಡಿದ್ದಾರೆ. ಕಾಂಟ್ರಾ ಕಾರ್ಯಾಚರಣೆ ಬಗ್ಗೆ ತಾನೇ ಅಧ್ಯಕ್ಷರಿಗೆ ಆಗಾಗ ವರದಿ ಮಾಡಿರುವುದಾಗಿ ತಿಳಿಸಿದ್ದಾರೆ.

ಇವರ ಮತ್ತು ಇನ್ನಿತರ ಸಾಕ್ಷಿಗಳಿಂದ ಈ ಕಾರ್ಯಾಚರಣೆಗೆ ವಿವಿಧ ಸರ್ಕಾರಿ ಸಂಘಟನೆಗಳಿಂದ ಹಲವು ವ್ಯಕ್ತಿಗಳೂ ಅಂತರಾಷ್ಟ್ರೀಯ ಖಾಸಗಿ ಕಾಂಟ್ರಾಕ್ಟರುಗಳು ಮತ್ತು ಖಾಸಗಿ ಬಲ ಪಂಥೀಯ ಸಂಘಟನೆಗಳು ಒಂದು ಸುವ್ಯವಸ್ಥಿತ ಕೂಟದಂತೆ ಕೆಲಸ ಮಾಡಿದವು. ಹಾಗೂ ಈ ಕಾರ್ಯಾಚರಣೆ ನಡೆಸಲು ಅತ್ಯಂತ ಉನ್ನತ ಅಧಿಕಾರಿಯಿಂದ (ಅಂದರೆ ಅಧ್ಯಕ್ಷರಿಂದ) ಮಂಜೂರಾತಿ ಮಾತ್ರವಲ್ಲ, ನಿರ್ದೇಶನವಿತ್ತು ಎಂದು ತಿಳಿದು ಬರುತ್ತದೆ. ಈ ಕೂಟವನ್ನು ನಡೆಸುತ್ತಿದ್ದವರು CIAಯ ಅಂದಿನ ಡೈರೆಕ್ಟರ್ ಕೇಸಿ.

ಚಿಕ್ಕಮಗಳೂರು

ಸಿ.ಐ.ಟಿ.ಯು. ಕಛೇರಿಯಲ್ಲಿ ಕಳವು ಸಂಘದ ಖಂಡನೆ

ಕರ್ನಾಟಕ ಪ್ರೊವಿನ್ಸಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್‌ನ ಸಂಘದ ಕಛೇರಿಗೆ ಇತ್ತೀಚೆಗೆ ಯಾರೋ ದುಷ್ಕರ್ಮಿಗಳು ನುಗ್ಗಿ ಬೀಗ ಹೊಡೆದು ಸಂಘದ ಕುರ್ಚಿ ವಗೈರೆ ಸ್ವತ್ತುಗಳನ್ನು ಅಪಹರಿಸುವುದನ್ನು ಖಂಡಿಸುವ ಹಾಗೂ ಈ ಕಳ್ಳರನ್ನು ಪತ್ತೆಹಚ್ಚಿ ಶಿಕ್ಷಿಸಬೇಕೆಂದು ಪೋಲೀಸು ಇಲಾಖೆಯನ್ನು ಒತ್ತಾಯಪಡಿಸುವ ನಿರ್ಣಯವನ್ನು ಸಂಘದ ಪದಾಧಿಕಾರಿಗಳು ಜೂನ್ 10 ರಂದು ಕಾಂ. ಸಿ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯು ಅಂಗೀಕರಿಸಿತು.

ಇತ್ತೀಚೆಗೆ ರಾಜ್ಯ ಸರ್ಕಾರವು ವಿದ್ಯುತ್ ದರ ಹಾಗೂ ಹಾಲು ಇತ್ಯಾದಿ ಅಗತ್ಯ ವಸ್ತುಗಳ ಬೆಲೆಗಳನ್ನು ವಿಪರೀತವಾಗಿ ಹೆಚ್ಚಿಸಿ ಜನಸಾಮಾನ್ಯರ ಜೀವನವನ್ನು ಮತ್ತಷ್ಟು ಸಂಕಷ್ಟಕ್ಕೊಳಪಡಿಸುವುದನ್ನು ಖಂಡಿಸುವ ಮತ್ತು ಕೂಡಲೇ ಏರಿಸಿರುವ ದರಗಳನ್ನು ಇಳಿಸಬೇಕೆಂದು ಒತ್ತಾಯಪಡಿಸುವ. ಕೆಲವು ವರ್ಷಗಳಿಂದ ನಮ್ಮ ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆಯನ್ನು ಛಿದ್ರಗೊಳಿಸಲು ಜಾತಿ, ಭಾಷೆ, ಕೋಮು, ಪ್ರಾಂತ್ಯ ಮೊದಲಾದ ಭಾವನೆಯನ್ನು ಜನರಲ್ಲಿ ಕೇರಳಿಸಿ ಜನರನ್ನು ವಿಭಜಿಸಲು ವಿದೇಶಿ ಶಕ್ತಿಗಳು ಪಿತೂರಿ ನಡೆಸುತ್ತಿದ್ದು, ಈಗ ನಮ್ಮ ರಾಜ್ಯದಲ್ಲೂ ಅಲ್ಲಲ್ಲಿ ಕೋಮು ಗಲಭೆಗಳನ್ನು ಪ್ರಚೋದಿಸುತ್ತಿದೆ. ಯಾವ ಸಂದರ್ಭದಲ್ಲೂ ಕಾರ್ಮಿಕ ವರ್ಗ ಈ ಬಗ್ಗೆ ಎಚ್ಚರದಿಂದಿರಬೇಕೆಂದೂ ಕೋಮು ಸೌಹಾರ್ಧತೆಯನ್ನು ರಕ್ಷಿಸಬೇಕೆಂದೂ ಕಾರ್ಮಿಕರಿಗೆ ಕರೆಕೊಡುವ ನಿರ್ಣಯವನ್ನು ಕೈಗೊಳ್ಳಲಾಯಿತು.

ಇತ್ತೀಚೆಗೆ ಮುಂಬಯಿಯಲ್ಲಿ ನಡೆದ ಸಿ. ಐ. ಟಿ. ಯು. ಅಖಿಲ ಭಾರತ 6ನೇಯಸಮ್ಮೇಳನದ ಮಹತ್ತರವಾದ ತೀರ್ಮಾನಗಳನ್ನು ವ್ಯಾಪಕವಾಗಿ ಕಾರ್ಮಿಕರ ಮಧ್ಯೆ ಪ್ರಚಾರಪಡಿಸಲು ತೀರ್ಮಾನಿಸಲಾಯಿತು.

ಪ್ರಪಂಚ ಶಾಂತಿ ರಕ್ಷಣೆಗಾಗಿ ಮಹಿಳೆಯರ ಪ್ರತಿಜ್ಞೆ

"ಬೇಡ ಬೇಡ ಹಿರೋಶಿಮಾ! ಮತ್ತೊಂದು ಸಾರಿ ನಮಗೆ ಯುದ್ಧ ಬೇಡ! ಶಾಂತಿ ಬೇಕು! ಮಕ್ಕಳು ಜೀವಿಸುವ ಹಕ್ಕು ಬೇಕು, ನಕ್ಷತ್ರ ಯುದ್ಧ ಬೇಡ, ನಕ್ಷತ್ರ ಶಾಂತಿ ಬೇಕು! ಎನ್ನುವ ಘೋಷಣೆಗಳು ಕಲ್ಕತ್ತಾ ಬೀದಿಗಳಲ್ಲಿ ಮಹಿಳೆಯ ಮಾರ್ದ್ವನಿ ಮೊಳಗಿತು.

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಎರಡನೇ ರಾಷ್ಟ್ರ ಸಮ್ಮೇಳನದ ಕರೆಯಂತೆ ಜೂನ್7 ಮತ್ತು 8ರಂದು 'ಶಾಂತಿ ಸಮ್ಮೇಳನ'ವನ್ನು ಏರ್ಪಡಿಸಲಾಗಿತ್ತು. ವಿವಿಧ ರಾಜ್ಯಗಳಿಂದ 432 ಪ್ರತಿನಿಧಿಗಳು ಭಾಗವಹಿಸಿದ್ದರು. ಸೋವಿಯತ್ ಹಾಗೂ ನಿಕರಾಗುವಾದಿಂದ ಸೌಹಾರ್ದ ಪ್ರತಿನಿಧಿಗಳು ಸಹ ಭಾಗವಹಿಸಿದ್ದರು.

ಕಲ್ಕತ್ತಾ 'ಪೇಯಿಂಟ್ಸ್ ಫ್ರಂಟ್' ರೂಪಿಸಿದ ಶಾಂತಿ ಸಂಕೇತದ ವರ್ಣರಂಜಿತವಾದ ವೇದಿಕೆಯು ಆಕರ್ಷಣೀಯವಾಗಿತ್ತು. ಈ ಸಮ್ಮೇಳನವು ಕಾ|| ಲಕ್ಷ್ಮಿ ಸೈಗಲ್, ಮಂಜರಿಗುಪ್ತ, ವಿಮಲಾರಣದಿವೆ, ಕನಕ ಮುಖರ್ಜಿ, ಪಾಪ ಉಮಾನಾಥ ಅಧ್ಯಕ್ಷೀಯ ಮಂಡಳಿಯಾಗಿ ಕೆಲಸ ನಿರ್ವಹಿಸಿದರು.

ಕಲ್ಕತ್ತಾ ಮೇಯರ್ ಶ್ರೀ ಕಮಲ ಕುಮಾರ್ ಬಸು ಪ್ರತಿನಿಧಿಗಳಿಗೆ ಸ್ವಾಗತ ಕೋರಿದರು.

ಕಾ|| ಜ್ಯೋತಿಬಸು ಈ ಸಮ್ಮೇಳನದ ಉದ್ಘಾಟನೆ ಮಾಡುತ್ತಾ "ಪ್ರಪಂಚದ ಮಾನವ ಬದುಕಿಗೆ ಗಂಡಾಂತರ ಒದಗಿರುವ ಸಂದರ್ಭದಲ್ಲಿ ಮಕ್ಕಳ ಭವಿಷ್ಯದ ಕುರಿತು ಯುದ್ದೋನ್ಮಾದರ ವಿರುದ್ಧ ಶಾಂತಿಪರರೆಲ್ಲರೂ ಒಂದಾಗಿ ತೀವ್ರ ಹೋರಾಟವನ್ನು ನಡೆಸಬೇಕಾದ ಆವಶ್ಯಕತೆ ಕುರಿತು ಹೊತ್ತಿ ತಿಳಿಸಿದರು. ಶಾಂತಿ ಚಳುವಳಿ ಮತ್ತಷ್ಟು ವಿಶಾಲಗೊಳಿಸಬೇಕೆಂದು ಮಹಿಳೆಯರಿಗೆ ಜ್ಯೋತಿಬಸು ಕರೆಕೊಟ್ಟರು.

ಶಾಂತಿ ಸಮ್ಮೇಳನದ ಉದ್ದೇಶದ ಕುರಿತು ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ರಾಷ್ಟ್ರ ಕಾರ್ಯದರ್ಶಿ ಕಾ|| ಸುಶೀಲಾ ಗೋಪಾಲ್‌ರವರು ಮಾತನಾಡುತ್ತಾ "ಯುದ್ಧ ಪಿಪಾಸುಗಳಾದ ಅಮೇರಿಕಾ ಸಾಮ್ರಾಜ್ಯಶಾಹಿಗಳ ಕುತಂತ್ರವನ್ನು ಬಯಲಿಗೆಳೆಯುವಲ್ಲಿ, ಸಮಾಜವಾದಿ ರಾಷ್ಟ್ರಗಳು ಸಾಧಿಸುತ್ತಿರುವ ಹೋರಾಟದ ಕುರಿತು, ಭಾರತದ ಸುತ್ತಮುತ್ತಲು ಯುದ್ಧದ ಭೀಕರ ವಾತಾವರಣ ಮೂಡುತ್ತಿರುವುದರಲ್ಲಿ ಪಾಕಿಸ್ತಾನ, ಶ್ರೀಲಂಕಾ, ಖಲಿಸ್ತಾನಿಗಳ ಪಾತ್ರದ ಕುರಿತು ವಿವರಿಸಿದರು. ಭಾರತ ದೇಶವನ್ನು ಎಲ್ಲಾ ಕಡೆಯಿಂದ ಮುತ್ತಿಗೆ ಹಾಕಿ ಸಾಮ್ರಾಜ್ಯವಾದಿಗಳಿಗೆ ಉಪಯೋಗಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಅಪಾಯದ ಕುರಿತು ಭಾರತ ದೇಶ ಸಂಪೂರ್ಣ ಗಮನಹರಿಸುವಲ್ಲಿ ವಿಫಲವಾಗಿದೆಯೆಂದು. ಆದ್ದರಿಂದಲೇ ಭಾರತ ದೇಶ ಸಾಮ್ರಾಜ್ಯವಾದಿಗಳ ವಿರುದ್ಧ ಜನರನ್ನು ಸಂಘಟಿಸಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದರು.

"ಅಣ್ವಸ್ತ್ರಕ್ಕೆ ವಿರುದ್ಧವಾಗಿ ಪ್ರಪಂಚ ಶಾಂತಿ ಸ್ಥಾಪನೆಯಲ್ಲಿ ಮಹಿಳೆಯರ ಪಾತ್ರ" ವಿಷಯದ ಕುರಿತು ಮೈಥಿಲಿ ಶಿವರಾಂ "ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿ ಸಾಮ್ರಾಜ್ಯವಾದಿಗಳ ವಿರುದ್ಧ ವಿಮೋಚನಾ ಹೋರಾಟಗಳಲ್ಲಿ ಮಹಿಳೆಯರ ಪಾತ್ರ"ದ ಕುರಿತು ಶ್ರೀಮತಿ ಶ್ಯಾಮಲಾ ಗುಪ್ತ, "ಪ್ರಪಂಚ ಶಾಂತಿ ಚಳುವಳಿಯಲ್ಲಿ ಭಾರತದ ಮಹಿಳೆಯರ ಪಾತ್ರದ"ಕುರಿತು ಶ್ರೀಮತಿ ವಿಮಲಾ ರಣದಿವೆ ಪ್ರಬಂಧ ಮಂಡಿಸಿದರು.

ಲೆನಿನ್ ಸ್ಕ್ವಯರ್‌ನ ದೊಡ್ಡ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದ ಈ ಮಹಿಳೆಯರು ಪ್ರಪಂಚ ಶಾಂತಿ ರಕ್ಷಣೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುವುದಾಗಿ, ಯುದ್ದೋನ್ಮಾದ, ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡುವುದಾಗಿ ಪ್ರತಿಜ್ಞೆ ಸ್ವೀಕರಿಸಿದರು. ●

ಕಾಲೇಜುಗಳ ಸ್ವಾಯುತ್ತತೆಗೆ ವಿರೋಧ

ನೂತನ ಶಿಕ್ಷಣ ನೀತಿಯ ಭಾಗವಾಗಿ ಯು.ಜಿ.ಸಿ ನಿರ್ದೇಶಗಳಿಗೆ ಮಣಿದು ಕೆಲವು ಕಾಲೇಜುಗಳಿಗೆ ಸ್ವಾಯುತ್ತತೆ ನೀಡ.ವ ಬೆಂಗಳೂರು ವಿ.ವಿ.ಸಿಂಡಿಕೇಟ್ ನಿರ್ಣಯವನ್ನು ಎಸ್.ಎಫ್.ಐ. ತೀವ್ರವಾಗಿ ವಿರೋಧಿಸಿದೆ. ನಿರ್ಣಯಕ್ಕೆ ಅನುಮೋದನೆನೀಡಬಾರದೆಂದು ಎಸ್.ಎಫ್.ಐ ರಾಜ್ಯ ಸಮಿತಿಯು ಮಾನ್ಯ ರಾಜ್ಯಪಾಲರನ್ನು ಒತ್ತಾಯಿಸಿದೆ.

ಹಾಜರಾತಿ ಕಡಿಮೆಯಿರುವ ನೆಪದಲ್ಲಿ 46 ಸರ್ಕಾರಿ ಕಿರಿಯ ಕಾಲೇಜುಗಳನ್ನು ಮುಚ್ಚುವ ನಿಟ್ಟನಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪ್ರಥಮ ಪಿ.ಯು ಸಿ.ತರಗತಿಗಳಿಗೆ ಪ್ರವೇಶಗಳನ್ನು ನಿಲ್ಲಿಸುವ ಸರ್ಕಾರದ ನಿರ್ಧಾರವನ್ನ ಎಸ್.ಎಫ್.ಐ. ತೀವ್ರವಾಗಿ ಖಂಡಿಸಿದೆ. ಸದರಿ ಕಾಲೇಜುಗಳನ್ನು ರೆಸಿಡೆನ್ಸಿಯಲ್ ಕಾಲೇಜುಗಳಾಗಿ ಪರಿವರ್ತಿಸಿಮುಚ್ಚುವ ಉದ್ದೇಶವನ್ನು ಕೈಬಿಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದೆ.

ಎಲ್ಲಾ ಹಂತದಲ್ಲೂ ಮಾತೃಭಾಷೆಯ ಮಾಧ್ಯಮದಲ್ಲಿ ಶಿಕ್ಷಣವನ್ನು ಒದಗಿಸಲು ಸರ್ಕಾರವು ನಿರ್ಧಿಷ್ಟ ಯೋಜನೆ ರೂಪಿಸಬೇಕೆಂದು ಹಾಗೂ ಇಂಗ್ಲೀಷ್ ಮಾಧ್ಯಮದ ಶಾಲೆಗಳನ್ನು ಪ್ರೋತ್ಸಾಹಿಸಬಾರದೆಂದು ಎಸ್.ಎಫ್.ಐ.ಒತ್ತಾಯಿಸಿದೆ. ಭಾಷಾ ಅಲ್ಪಸಂಖ್ಯಾತರಿಗೆ ತಮ್ಮದೇ ಆದ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವಂತಾಗಲೂ ಆಯಾ ಭಾಷೆಯ ಮಾಧ್ಯಮದ ಶಾಲೆಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಪ್ರಾರಂಭಿಸಬೇಕೆಂದು ಸಹ ಒತ್ತಾಯಿಸಿದೆ. ○

ಚಿಂತಾಮಣಿಯಲ್ಲಿ ಡಿ. ವೈ. ಎಫ್. ಐ. ಅಧ್ಯಯನ ಶಿಬಿರ

ಜೂನ್17-18ರಂದು ಚಿಂತಾಮಣಿಯಲ್ಲಿ ತಾಲ್ಲೂಕು ಮಟ್ಟದ ಅಧ್ಯಯನ ಶಿಬಿರ ನಡೆಯಿತು. ರಾಜ್ಯ ಕಾರ್ಯದರ್ಶಿ ಕಾ||ಶಿವರಾಂ ಸೆಪ್ಟೆಂಬರ್‌ನ "ಎಲ್ಲರಿಗೂ ಶಿಕ್ಷಣ ಎಲ್ಲರಿಗೂ ಉದ್ಯೋಗ"ದ ಹೋರಾಟದ ಬಗ್ಗೆ ವಿವರಿಸಿದರು. ಕಾ|| ಜಿ.ವಿ. ಶ್ರೀರಾಮ ರೆಡ್ಡಿ "ಯುವಕರು ಮತ್ತು ರಾಜಕೀಯ ಪಕ್ಷಗಳು" "ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಯುವ ಜನರ ಪಾತ್ರ" ಎಂಬ ಬಗ್ಗೆ ಉಪನ್ಯಾಸ ನೀಡಿದರು. ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಜಿ. ವಿ. ಅಶ್ವತ್ಥನಾರಾಯಣ ರೆಡ್ಡಿ ಕೋಲಾರ ಜಿಲ್ಲೆಯ ರೈತ ಹೋರಾಟಗಳ ಬಗ್ಗೆ ಮಾತನಾಡಿ ಕೋಲಾರದಲ್ಲಿ ಯುವಕರ ಸಂಘಟನೆಯನ್ನು ಬಲಪಡಿಸಲು ಕರೆ ನೀಡಿದರು.

ಶಿಬಿರದ ಕೊನೆಯಲ್ಲಿ ಸಂಚಾಲಕ ಸಮಿತಿಯನ್ನು ರಚಿಸಲಾಯಿತು. ಎಂ. ಸಿ. ಆನಂದ್ ಸಂಚಾಲಕರಾಗಿ, ಅಮರೇಂದ್ರ ಸಹ ಸಂಚಾಲಕರಾಗಿರುವ ಸಮಿತಿಯಲ್ಲಿ ನಾಗರಾಜ ಶೆಟ್ಟಿ, ವೆಂಕಟರಮಣ ರೆಡ್ಡಿ ಜಿ.ಎಲ್.ಕೃಷ್ಣಪ್ಪ, ತಿಪ್ಪರೆಡ್ಡಿ, ಎನ್. ರಾಮಚಂದ್ರ, ಅಶ್ವತಪ್ಪ, ವೆಂಕಟರಮಣ, ಆರ್. ಎಸ್. ವೆಂಕಟರಮಣ, ಬಿ. ಎಲ್. ಮನೋಹರ, ಇವರುಗಳನ್ನು ಸಮಿತಿಗೆ ಆಯ್ಕೆ ಮಾಡಲಾಯಿತು. ●

ಬೆಲೆ ಏರಿಕೆಗೆ ಖಂಡನೆ

ಸಿ.ಪಿ.ಐ.(ಎಂ)ನ ಶಿವಮೊಗ್ಗನಗರ ಶಾಖೆಯು ಕಾ| ಮೊಹ್ಮದ್‌ಇಬ್ರಾಹಿಂರವರ ಅಧ್ಯಕ್ಷತೆಯಲ್ಲಿ ಮೇ 10ರಂದು ಸಭೆ ಸೇರಿ ಇತ್ತೀಚೆಗೆ ರಾಜ್ಯಸರ್ಕಾರವು ಹಾಲಿನ ದರ ಮತ್ತು ವಿದ್ಯುತ್ ದರವನ್ನು ಏರಿಸಿರುವುದನ್ನು ಖಂಡಿಸಿತು. ಇತ್ತೀಚೆಗೆ ನಡೆದ ಶಿವಮೊಗ್ಗದ ನಗರ ಸಭಾ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆಯಲ್ಲಿ ಕೋಮುವಾದಿ ಪಕ್ಷಕ್ಕೆ ಕಾಂಗ್ರೆಸ್ ಸದಸ್ಯರು ಮತ ನೀಡಿರುವುದರಿಂದ ಕಾಂಗ್ರೆಸ್ಸಿನ ನಿಜ ಬಣ್ಣ ಬಯಲಾಗಿದೆಯೆಂದೂ ಹಾಗೂ ಬಿ.ಜೆ.ಪಿ.ಯು ಸರ್ವಾಧಿಕಾರಿ ಶಕ್ತಿಯ ವಿರುದ್ಧ ಹೋರಾಡುತ್ತದೆಂದು ತಿಳಿದಿದ್ದ ಬಿ.ಜೆ.ಪಿ. ಕಾರ್ಯಕರ್ತರಿಗೆ ಅದು ಸುಳ್ಳೆಂಬುದು ಮನವರಿಕೆಯಾಗಿದೆಯೆಂದೂ ಆದ್ದರಿಂದ ಸರ್ವಾಧಿಕಾರದ ವಿರುದ್ಧ ಕೋಮುವಾದದ ವಿರುದ್ಧ ಹೋರಾಡುವ ಕಾಂಗ್ರೆಸ್ಸಿನಲ್ಲಿರುವ ಬಿ.ಜೆ.ಪಿ.ಯಲ್ಲಿರುವ ನಿಷ್ಠಾವಂತ ಕಾರ್ಯಕರ್ತರು ಎಚ್ಚೆತ್ತು ಎಡ-ಪ್ರಜಾಪ್ರಭುತ್ವ ಜ್ಯಾತ್ಯಾತೀತ ಪಕ್ಷಗಳೊಂದಿಗೆ ಸೇರಿ ದುಡಿಯಬೇಕೆಂದು ಸಭೆ ಕರೆ ನೀಡಿದೆ.

ಐಕ್ಯರಂಗಕ್ಕೆ

ಚಂದದಾರರಾಗಿರಿ

ವಾರ್ಷಿಕ	50 ರೂ.
ಅರ್ಧವಾರ್ಷಿಕ	25 ರೂ.

ವಿದ್ಯುಚ್ಛಕ್ತಿ ದರ ಏರಿಕೆಗೆ ಸಿ.ಪಿ.ಐ.[ಎಂ] ಪ್ರತಿಭಟನೆ

ಕರ್ನಾಟಕ ಸರ್ಕಾರವು ಏರಿಸಿರುವ ವಿದ್ಯುಚ್ಛಕ್ತಿ ದರವನ್ನು ಕೂಡಲೇ ಇಳಿಸಬೇಕೆಂದು ಒತ್ತಾಯಿಸಿ ಬಂಟ್ವಾಳದ ಕೆ.ಇ.ಬಿ. ಆಫೀಸಿನ ಮುಂದೆ ಸಿ ಪಿ.ಐ. (ಎಂ)ನ ನೇತೃತ್ವದಲ್ಲಿ ತಾ:[illegible]8ರಂದು ಧರಣಿ ಸತ್ಯಾಗ್ರಹ ನಡೆಯಿತು.

ಬಂಟ್ವಾಳ ತಾಲ್ಲೂಕಿನ ವಿದ್ಯುಚ್ಛಕ್ತಿಬಳಕೆದಾರರ ಪರವಾಗಿ ರಾಜ್ಯದ ಮುಖ್ಯಮಂತ್ರಿಗಳವರಿಗೆ ಸಿ.ಪಿ ಐ. (ಎಂ)ನ ಕಾರ್ಯದರ್ಶಿ ಶ್ರೀ ಬಿ.ವಾಸುಗಟ್ಟಿಯವರು ಕಳುಹಿಸಿರುವ ಮನವಿಯಲ್ಲಿ ಜನಸಾಮಾನ್ಯರ ಜೀವನ ಮಟ್ಟವನ್ನು ಉತ್ತಮಪಡಿಸುವುದಾಗಿ ಭರವಸೆ ನೀಡಿ ಜನತೆಯನ್ನು ನಂಬಿಸಿ ಅಧಿಕಾರಕ್ಕೆ ಬಂದ ಜನತಾ ಪಕ್ಷವು ಜನತೆಯನ್ನು ಕ್ರೂರ ರೀತಿಯಲ್ಲಿ ಸುಲಿಗೆ ಮಾಡುತ್ತಿರುವುದರಿಂದ ಇದು ಜನತೆಗೆ ಬಗೆದ ವಿಶ್ವಾಸಘಾತುಕ ಕೃತ್ಯವಾಗಿದೆ ಎಂದು ಹೇಳಿದ್ದಾರೆ. ●

ಇರಾನ್ ಗೇಟ್

(4ನೇ ಪುಟದಿಂದ)

ವಿಮಾನಗಳನ್ನು ಪಡೆಯುವುದಕ್ಕೆ ಮೇಜರ್ ಸೆಕಾರ್ಡ್ ನೆರವು ನೀಡಿದ. ಈ ವಿಮಾನವನ್ನು ಹಕೀಂ ಇರಾನ್‌ಗೆ ಮಾರಿ ಹೆಚ್ಚು ಲಾಭಗಳಿಸಿದ್ದಲ್ಲದೆ ಅದಕ್ಕೂ ಮೀರಿದ ಹಣವನ್ನು ಸೆಕಾರ್ಡ್‌ಗೆ ನೀಡಿದ. ಸೆಕಾರ್ಡ್ ಈ ಹಣದಿಂದ ಆರಂಭವಾದದ್ದು ನಿಕರಾಗುವಾದ ಸರ್ವಾಧಿಕಾರಿ ಸಾಮ್ರಾಟ್‌ನಿಗೆ ಆಗ ಅಲ್ಲಿ ನಡೆಯುತ್ತಿದ್ದ ಸ್ಯಾಂಡಿನಿಸ್ಟಾಗಳ ನೇತೃತ್ವದ ಕ್ರಾಂತಿಕಾರಿ ಹೋರಾಟವನ್ನು ಬಗ್ಗು ಬಡಿಯುವುದಕ್ಕೆ ಶಸ್ತ್ರಾಸ್ತ್ರಗಳನ್ನು ಖರೀದಿಸಿ ನೀಡಿದ.

ಹೀಗೆ ಇರಾನ್‌ಗೇಟ್ ಹಗರಣ ಇಂದು ನಿನ್ನೆಯದಲ್ಲ ಅನೇಕ ವರ್ಷಗಳಿಂದ ಎಲ್ಲಿ ಕ್ರಾಂತಿ ಸಂಭವವಿದೆಯೋ ಅದನ್ನು ಮುರಿಯುವುದಕ್ಕೆ ಎಲ್ಲಿ ಕ್ರಾಂತಿ ಸಂಭವಿಸಿ ಪ್ರಗತಿಪರ ಸರ್ಕಾರ ಅಧಿಕಾರಕ್ಕೆ ಬಂದಲ್ಲೆಲ್ಲಾ ಅದರ ವಿರುದ್ಧ ಪ್ರತಿಕ್ರಾಂತಿಕಾರಿಗಳಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸುವುದಕ್ಕೆ ಈ ತಂಡ1960ರಿಂದಲೂ ಕೆಲಸಮಾಡಿದೆ.

ಡಿ. ವೈ. ಎಫ್. ಐ. ಆಂಧ್ರ ರಾಜ್ಯ ಸಮ್ಮೇಳನ

ಆಂಧ್ರ ಪ್ರದೇಶದ ಗುಂಟೂರಿನ ಮಂಗಳ ಗಿರಿಯಲ್ಲಿ ಡಿ.ವೈ ಎಫ್.ಐ. ಐದನೇ ರಾಜ್ಯ ಸಮ್ಮೇಳನವು ಜೂನ್ 1ಮತ್ತು2ರಂದು ಕಾ|| ಬಿಳ್ಳ ಸುಧಾಕರ ಪ್ರಾಂಗಣದಲ್ಲಿ (ಅನ್ನಪೂರ್ಣ ಸಿನಿಮಾಮಂದಿರ) ನಡೆಯಿತು.

ಈಸಮ್ಮೇಳನದ ಉದ್ಘಾಟನೆಯನ್ನು ಕ್ಯಾಪ್ಟನ್‌ಲಕ್ಷ್ಮಿ ಸೈಗಲ್‌ಮಾಡುತ್ತಾ "ಯುವಕರು ವಿಚ್ಛಿದ್ರಕಾರಿ, ಬಂಡವಾಳಶಾಹಿಗಳ ವಿರುದ್ಧ, ಸರ್ವರಿಗೂ ಶಿಕ್ಷಣ, ಸರ್ವರಿಗೂ ಉದ್ಯೋಗಕ್ಕೂ ಹೋರಾಡಬೇಕೆಂದು ಕರೆಕೊಟ್ಟರು. ಪ್ರತಿನಿಧಿಗಳ ಸ್ವಾಗತವನ್ನು ಮಂಗಳಗಿರಿ ಮಂಡಲ ಪ್ರಜಾ ಪರಿಷತ್ ಅಧ್ಯಕ್ಷರಾದ ಶ್ರೀ ನಿಮ್ಮಗಡ್ಡಾ ರಾಮ ರಾಮ ಮಹಾಸನ ರಾವ್ ಕೋರಿದರು. ವಿಶೇಷವಾಗಿ ಕಾ|| ಸುಂದರಯ್ಯನವರ ತ್ಯಾಗ, ಬಲಿದಾನಗಳ ಕುರಿತು ಸ್ಮರಿಸಿ, ಸಮ್ಮೇಳನ ಪ್ರಾರಂಭಗೊಂಡಿತು. ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ವಿ.ಕೃಷ್ಣಯ್ಯ ಶುಭಾಶಯ ಕೋರಿದರು. ಡಿ.ವೈ.ಎಫ್.ಐ. ಅಧ್ಯಕ್ಷರಾದ ಸುದರ್ಶನ ಧ್ವಜಾರೋಹಣ ಮಾಡಿದರು.

5C0 ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ●

ಪೋಲೆಂಡಿನ ಪ್ರತಿಕ್ರಾಂತಿಕಾರಿಗಳು ಹಾಗೂ ನಿಕರಾಗುವಾದ ದಂಗೆಕೋರರು

ಪೋಲೆಂಡಿನ ಪ್ರತಿಕ್ರಾಂತಿವಾದಿ 'ಸಾಲಿಡಾರಿಟಿ, ನಿಕರಾಗುವಾದಲ್ಲಿ ಧಾಂದಲೆ ನಡೆಸುತ್ತಿರುವ 'ಕಾಂಟ್ರಾ, ಗಳಿಗೆ ಶಸ್ತ್ರಾಸ್ತ್ರಗಳನ್ನು ಕಳ್ಳತನದಿಂದ ರವಾನಿಸಿದೆಯೆಂದು ಅಧ್ಯಕ್ಷ ರೇಗನ್‌ರ ಮಾಜಿ ಸಲಹೆಗಾರ ಕರ್ನಲ್ ಓಲಿವರ್ ನಾರ್ತ್ ಅಪಾದಿಸಿದ್ದಾರೆ. ಸಾಲಡಾರಿಟಿಯಿಂದ ಶಸ್ತ್ರಾಸ್ತ್ರಗಳನ್ನು ಕೊಂಡುಕೊಳ್ಳುವುದರಲ್ಲಿ ತನ್ನ ನಿಕಟಪಾತ್ರ ವಿದೆಯೆಂದೂ ಓಲಿವರ್ ನಾರ್ತ್ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

"ವಾಷಿಂಗ್‌ಟನ್ ಟೈಮ್ಸ್" ಗೆ ನಾರ್ತ್‌ನೀಡಿದ್ದ ಇನ್ನೊಂದು ಹೇಳಿಕೆ ಪ್ರಕಾರ ಪೋಲೆಂಡ್ ಮತ್ತಿತರ ಪೂರ್ವ ಯುರೋಪಿನ ರಾಷ್ಟ್ರಗಳಲ್ಲಿ ಸೋವಿಯತ್ ಲೈಸೆನ್ಸಿನಿಂದ ಉತ್ಪಾದನೆಯಾಗುತ್ತಿದ್ದ ಶಸ್ತ್ರಾಸ್ತ್ರಗಳು ಗೂಡ್ಸ್- ವ್ಯಾಗೀನುಗಳಲ್ಲಿ ಪೋಲೀಶ್ ರೈಲುನಿಲ್ದಾಣಗಳಿಗೆ ಬರುವಾಗ ಪೋಲೆಂಡಿನ ರೈಲ್ವೆ‌ವಾರ್ಡ‌ಗಳಲ್ಲಿ ದುಡಿಯುವ "ಸಾಲಡಾರಿಟಿಯ" ಸದಸ್ಯರು ಕೆಲವು ವ್ಯಾಗೀನುಗಳ ಹಳಿ ಬದಲಾಯಿಸಿ ಅವುಗಳನ್ನು ಪಶ್ಚಿಮ ಯುರೋಪಿನ ರಾಷ್ಟ್ರಗಳಿಗೆ ಹೋಗುವ ಟ್ರೈನುಗಳಿಗೆ ಜೋಡಿಸಿದ್ದರು. ಅಲ್ಲಿಂದ ಮುಂದೆ ಈ ಶಸ್ತ್ರಾಸ್ತ್ರಗಳನ್ನು ಕೊಂಡುಕೊಂಡು "ಕಾಂಟ್ರಾ"ಗಳಿಗೆ ಸರಬರಾಜು ಮಾಡಲಾಗುತ್ತಿತ್ತು. ಇಷ್ಟರವರೆಗೆ ಹೀಗೆ ಕದ್ದು "ಕಾಂಟ್ರಾ"ಗಳಿಗೆ ಮಾರಾಟ ಮಾಡಲಾದ ಶಸ್ತ್ರಾಸ್ತ್ರಗಳ ಪ್ರಮಾಣವೆಷ್ಟು ಮತ್ತು ಈ ವ್ಯವಹಾರದಲ್ಲಿ 'ಸಾಲಿಡಾರಿಟಿ'ಯ ನಾಯಕ ಲೇಕ್ ವಲೇಸಾನ ಪಾತ್ರವೇನು ಎಂಬಪ್ರಶ್ನೆಗಳಿಗೆ ಉತ್ತರ ನೀಡಲು ಕರ್ನಲ್ ನಾರ್ತ್ ನಿರಾಕರಿಸಿದ್ದಾರೆ.

ಕೆಲವು ವರ್ಷಗಳ ಹಿಂದೆ ಸಾಲಿಡಾರಿಟಿ, ಪೋಲೆಂಡಿನಲ್ಲಿ ಮಾನವ ಹಕ್ಕುಗಳ ಮತ್ತು ಪ್ರಜಾಪ್ರಭುತ್ವದ ಸ್ಥಾಪನೆಗಾಗಿ ಹೋರಾಡುವ ಸಂಸ್ಥೆಯೊಂದು ಬಂಡವಾಳಶಾಹಿ ಜಗತ್ತಿನಲ್ಲಿ ಎಲ್ಲೆಡೆ ಪ್ರಚಾರ ನಡೆಸಿತ್ತು. ಸಾಲಿಡಾರಿಟಿಯಪಾಲಿಗೆ, "ಮಾನವಹಕ್ಕು, "ಸ್ವಾತಂತ್ರ" 'ಪ್ರಜಾಪ್ರಭುತ್ವ, ವೆಂದರೆ ಬಂದೂಕುಗಳನ್ನು ಕಳ್ಳತನದಿಂದ ಲಪಟಾಯಿಸಿ ಶಾಲೆ, ಆಸ್ಪತ್ರೆಗಳನ್ನು ನಾಶಮಾಡಲು ಮತ್ತು ಮಕ್ಕಳು ಹಾಗೂ ಮುಗ್ಧ ಜನರ ಹತ್ಯೆ ನಡೆಸುವುದಕ್ಕೆ ನೆರವಾಗುವುದು ಎಂಬ ಅರ್ಥವಿರಬೇಕು !

ಒಬ್ಬ ಕಲಾವಿದನ ಸಾವು - ಜಪಾನೀ ನ್ಯಾಯದ ವೈಖರೀ

ಜಪಾನಿನ ಒಬ್ಬ ಕಲಾವಿದ ಸದಾಮಿಚಿ ಹಿರಾಸಾವಾ ಇತ್ತೀಚೆಗೆ ಮೃತಪಟ್ಟನೆಂದು ಜಪಾನ್ ಪತ್ರಿಕೆಗಳಲ್ಲಿ ವರದಿಯಾಗಿದೆ. ಹಿರಾಸಾವಾ ಪ್ರಖ್ಯಾತನಾಗಿದ್ದು ಅವನಕಲಾಕೃತಿಗಳಿಂದಲ್ಲ. ಆತ ಮರಣ ದಂಡನೆ ಶಿಕ್ಷೆಗೆ ಒಳಗಾಗಿ ಕಳೆದ ಮೂವತ್ತೆರಡು ವರ್ಷಗಳ ಕಾಲ ಜೇಲಿನಲ್ಲಿ ಕೊಳೆಯುತ್ತಿದ್ದ. ವಿಚಿತ್ರ ಎಂದರೆ ಅವನಿಗೆ ಮರಣ ದಂಡನೆ ವಿಧಿಸಿದ ಹನ್ನೆರಡು ಜನ ನ್ಯಾಯಾಧೀಶರಲ್ಲಿ ಒಬ್ಬರಿಗೂ ಮರಣದಂಡನೆ ಶಿಕ್ಷೆಯನ್ನು ಜ್ಯಾರಿಗೊಳಿಸಲು ಸಾಧ್ಯವಾಗಿಲ್ಲ; ಅವನನ್ನು ವಿಮೋಚನೆ ಗೊಳಿಸುವುದೂ ಅವರಿಂದಾಗಲಿಲ್ಲ.

ಜನವರಿ 26, 1948ರಲ್ಲಿ ಜಪಾನಿನ ಬ್ಯಾಂಕೊಂದರ ಕಚೇರಿಗೆ ಒಬ್ಬ ವ್ಯಕ್ತಿ ಒಳಹೊಕ್ಕು ತಾನು ಸರ್ಕಾರದ ಆರೋಗ್ಯ ಅಧಿಕಾರಿಯೆಂದೂ ನಗರದಲ್ಲಿ ಕಾಲರಾ ಹಾವಳಿ ಬರುವ ಸಂಭವ ಇರುವ ಕಾರಣ ಎಲ್ಲರಿಗೂ ಒಂದೊಂದು ಇಂಜೆಕ್ಷನ್ ಚುಚ್ಚಬೇಕಾಗಿದೆಯೆಂದೂ ಹೇಳಿದ. ಹಾಗೆಯೇ 16 ಜನ ನೌಕರರಿಗೆ ಇಂಜೆಕ್ಷನ್ ಚುಚ್ಚಿ ಒಂದೊಂದು ಮಾತ್ರೆಗಳನ್ನು ತಿನ್ನಲು ಕೊಟ್ಟ. ಇದಾದ ಮೂರು ನಿಮಿಷದಲ್ಲಿ ಹದಿನಾಮಂದಿಯಲ್ಲಿ ಹನ್ನೆರಡು ಜನ ಸತ್ತುಹೋದರು ಇಂಜೆಕ್ಷನ್ ಚುಚ್ಚಿದ್ದ ವ್ಯಕ್ತಿ ಅಷ್ಟರಲ್ಲಿ ಪರಾರಿಯಾಗಿದ್ದ.

ಜಪಾನ್ ಪೋಲೀಸರು ಕಲಾವಿದ ಸದಾಮಿಚಿ ಹಿರಾಸಾವಾನೇ ಈ ಕೊಲೆಗಾರನೆಂದು ಆರೋಪಿಸಿ ಅವನ ಮೇಲೆ ದಾವೆ ಹೂಡಿದರು. ತಾನು ಅಪರಾಧಿಯಲ್ಲವೆಂದು ಆತ ಹೇಗೆ ಹೇಳಿಕೊಂಡರೂ ನ್ಯಾಯಾಲಯ ಅವನ ವಾದನನ್ನು ಒಪ್ಪಿಕೊಳ್ಳಲಿಲ್ಲ. ಇಂಜೆಕ್ಷನ್ ನಲ್ಲಿ ಬಳಸಲಾಗಿದ್ದ ರಾಸಾಯನಿಕದ ಪಂಚಯ ಮುಗ್ಧ ಕಲಾವಿದ ಹಿರಾಸಾವಾನಿಗೆ ಇರಲು ಸಾಧ್ಯವೇ ಇಲ್ಲವೆಂದು ಅನೇಕಾನೇಕ ಸಾರ್ವಜನಿಕ ಸಂಸ್ಥೆಗಳು ವಾದಿಸಿದ್ದರೂ ಈ ವಾದವೆಲ್ಲ ನಿಷ್ಫಲವಾಯಿತು.ನ್ಯಾಯಾಲಯ ಹಿರಾಸಾವಾನಿಗೆ ಮರಣದಂಡನೆ ವಿಧಿಸಿ 32 ವರ್ಷಕಾಲ ಅವನನ್ನು ಜೈಲಿನಲ್ಲಿ ಕೊಳೆಹಾಕಿತು.

ಈ ಕೊಲೆಯ ಹಿಂದಿದ್ದ ರಹಸ್ಯವೇನು? ಜಪಾನಿನ ಪ್ರಮುಖ ಸಂಶೋಧಕನಾಗಿದ್ದ ಜಿರೋಫುಜಿಟಾ ಎಂಬಾತ 1948ರಲ್ಲಿ ಬರೆದ ಒಂದು ಪತ್ರದಲ್ಲಿ ಇದರ ವಿವರಣೆ ನೀಡಿದ್ದ, ಬ್ಯಾಂಕ್ ನೌಕರರ ಕೊಲೆಯಲ್ಲಿ ಬಳಸಲಾಗಿದ್ದ ರಾಸಾಯನಿಕವಸ್ತು ಆ ಕಾಲದಲ್ಲಿ ಜಪಾನೀ ಸೈನ್ಯಖಾತೆ ಕೀಟಾಣು ಯುದ್ಧಕ್ಕಾಗಿ ಸಂಶೋಧಿಸಿದ್ದ ದ್ರಾವಕವಾಗಿತ್ತು. ಜನರಲ್ ಶಿರೋ ಇಶಿಲ್ ಎಂಬಾತನ 731ನೇಸೈನಿಕ ಘಟಕ ಈ ರಾಸಾಯನಿಕವನ್ನು ಬಳಸುತ್ತಿತ್ತು. ಈ ಕೀಟಾಣು ಯುದ್ಧದರಾಸಾಯನಿಕವನ್ನು ಚೀನಾ ಮತ್ತು ಸೋವಿಯತ್ ಒಕ್ಕೂಟದ ವಿರುದ್ಧ ಬಳಸುವ ಸಲುವಾಗಿ ಅಭಿವೃದ್ಧಿ ಪಡಿಸಲಾಗಿತ್ತಂತೆ. ಇದರ ಹೆಸರು 'ನಿಟ್ರೈಲ್, ಜನರಲ್ ಶಿರೋ ಇಶಿಲ್ ಇದನ್ನು ಒಪ್ಪಿಕೊಂಡು ತನ್ನ 731ನೇ ಘಟಕದಲ್ಲಿದ್ದ ಎಲ್ಲಾ ಸೈನಿಕರ ಪಟ್ಟಿಯನ್ನು ಅಮೇರಿಕದ ಗುಪ್ತಚರದಳದವರಿಗೆ ನೀಡಿದ್ದ. ಈ ಪಟ್ಟಿಯ ಆಧಾರದಲ್ಲಿ ಕೀಟಾಣು ರಾಸಾಯನಿಕವನ್ನು ಬಳಸಿ ಬ್ಯಾಂಕ್ ನೌಕರರನ್ನು ಹತ್ಯೆ ಮಾಡಿದ ಕೊಲೆಗಾರ ಯಾರೆಂಬುದನ್ನು ಸುಲಭದಲ್ಲಿ ಪತ್ತೆಮಾಡಬುದಾಗಿತ್ತು. ಈ ಪಟ್ಟಿ ನೀಡಿದ ಜನರಲ್ ಶಿರೋ ಇಶಿಲ್ ಸ್ವತಃ ಟೋಕಿಯೋ ಯುದ್ಧಾಪರಾಧಿಗಳ ನ್ಯಾಯಾಲಯದಿಂದ ರಕ್ಷಣೆ ಪಡೆದ ಆದರೆ ಈ ಮಾರಕ ರಾಸಾಯನಿಕವನ್ನು ಪ್ರಯೋಗಾತ್ಮಕವಾಗಿ ಬಳಸಿ ಹನ್ನೆರಡು ಜನರನ್ನು ಕೊಂದ ಕೊಲೆಗಡ-ಕ ಪತ್ತೆಯಾಗಲೇ ಇಲ್ಲ. ಪೋಲೀಸರಿಗೆ ಅಪರಾಧಿಯೊಬ್ಬ ಬೇಕಾಗಿತ್ತು. ಕೊನೆಗೂ ಅವರು ನಿಜವಾದ ಕೊಲೆಗಡುಕರನ್ನು ಮರೆಮಾಚಿ ಬಡಪಾಯಿ ಕಲಾವಿದ ಸದಾಮಿಚಿ ಹಿರಾಸಾವಾನನ್ನು ಬಲಿಪಶು ಮಾಡಿದರು. ರಾಸಾಯಿಕ ಕೀಟಾಣು ಯುದ್ಧದ ಬಗ್ಗೆ ಏನೂ ಗೊತ್ತಿರದಿದ್ದ ಈ ಕಲಾವಿದ ಅಮೇರಿಕಾ ಮತ್ತು ಜಪಾನಿನ ಪೈಶಾಚಿಕ ಪ್ರವೃತ್ತಿಗೆ ಬಲಿಯಾಗಿ ಸೆರೆಮನೆಯಲ್ಲಿ ಕೊಳೆತು ಸಾಯಬೇಕು.

ಹೇಗಿದೆ ಬಂಡವಾಳಶಾಹಿಗಳ ನ್ಯಾಯ ತೀರ್ಮಾನದ ವೈಖರಿ !

ಭ್ರಷ್ಟಾಚಾರದ ವಿರುದ್ಧ ಬಡಿಗೆಯೆತ್ತಿದ ಕೇರಳ ಸರ್ಕಾರ

ಕೇರಳದ ಎಡ-ಪ್ರಜಾಸತ್ತಾತ್ಮಕ ರಂಗದ ಸರ್ಕಾರ ರಾಜ್ಯದಲ್ಲಿ ಕರುಣಾಕರನ್ ಆಡಳಿತದ ಸಮಯದಲ್ಲಿ ಕೋಲಾಹಲವನ್ನುಂಟುಮಾಡಿದಹಲವು ಭ್ರಷ್ಟಾಚಾರದ ಹಗರಣಗಳ ಬಗ್ಗೆ ಕ್ರಮ ಜರುಗಿಸಲು ನಿರ್ಧರಿಸಿದೆ. ಹಿಂದಿನ ಕಾಂಗ್ರೆಸ್(ಐ) ನೇತೃತ್ವದ ಸರ್ಕಾರದ ಮೂರು ಮಂತ್ರಿಗಳು ಭ್ರಷ್ಟಾಚಾರದ ವ್ಯವಹಾರದಲ್ಲಿ ಒಳಗಾಗಿದ್ದರ ಕುರಿತು ವಿಚಾರಣೆ ನಡೆಸಲು ಮಂತ್ರಿಮಂಡಲ ತೀರ್ಮಾನ ಕೈಗೊಂಡಿದೆ.

ಪಂಜಾಬ್‌ನ ವಾಣಿಜ್ಯೋದ್ಯಮಿ ಒಬ್ಬರಿಂದ ಖರೀದಿಸಿದ 11ಕೋಟಿ ರೂ. ಬೆಲೆ ನೀಡಿ ಅಕ್ಕಿಯನ್ನು ಖರೀದಿಸುವ ವ್ಯವಹಾರದಲ್ಲಿ ದುರುಪಯೋಗ ನಡೆಸಿರುವ ಆಪಾದನೆ ಎದುರಿಸುತ್ತಿದ್ದ ಕಾರಣ ಬೇರಿನ್‌ರವರಿಗೆ ಇತ್ತೀಚೆಗೆ ನಡೆದ ಕೇರಳ ವಿಧಾನ ಸಭಾ ಚುನಾವಣೆಯಲ್ಲಿ ಟಿಕೇಟ್‌ನಿರಾಕರಿಸಲಾಯಿತು.

ಅಂದಿನ ವಿಧಾನ ಸಭೆಯು ಕಾ॥ಕೆ. ಆರ್. ಗೌರಿಯವರು ಅಡಿಟರ್‌ಜನರಲ್ ಹಾಗೂ ಪಬ್ಲಿಕ್‌ಅಕೌಂಟ್‌ಸಮಿತಿಯನ್ನೊಳಗೊಂಡ ಸಮಿತಿ ಅಕ್ಕಿಖರೀದಿಯಲ್ಲಿ ಕಳಪೆ ಗುಣಮಟ್ಟದ ಹಾಗೂ ಕಡಿಮೆ ಬೆಲೆಯ ಅಕ್ಕಿಗೆ ಹೆಚ್ಚಿನ ಹಣ ನೀಡಿದ್ದರಿಂದ ರಾಜ್ಯದ ಬೊಕ್ಕಸಕ್ಕೆ 1ಕೋಟಿಯಷ್ಟು ನಷ್ಟ ಉಂಟಾಗಿದೆ ಎಂದು ತೀರ್ಮಾನಿಸಿತ್ತು. ಈ ಪ್ರಕರಣದ ಕುರಿತು ವಿಚಾರಣೆ ನಡೆಸಲು ಕೇರಳದ ಹೈ ಕೋರ್ಟ್‌ನ ನ್ಯಾಯದೀಶರು ಆದೇಶಿಸಿದ್ದರು.

ಕೇರಳದ ಮುಖ್ಯಮಂತ್ರಿ ಕಾ॥ಇ. ಕೆ. ನಾಯನಾರ್ ಈ ಹಗರಣಗಳ ಕುರಿತು ವಿಚಾರಣೆ ನಡೆಸುವುದನ್ನು ಪ್ರಕಟಿಸಿದರು. ಇದಲ್ಲದೆ, ಜೆ. ಎಂ. ಜೆಕಬ್‌ರವರು ಪ್ರೀ-ಡಿಗ್ರಿ ಬೋರ್ಡನ ಸ್ಥಾಪನೆ ಹಾಗೂ ನೌಕರ-ವಿದ್ಯಾರ್ಥಿಗಳ ಅಪಾದನೆಗಳ ಕುರಿತು ವಿಚಾರಣೆಯನ್ನು ಎದುರಿಸಲಿದ್ದಾರೆ. 1986ರ ಫಲಿತಾಂಶ ಪ್ರಕಟನೆಯಲ್ಲಿ ತಾರತಮ್ಯ, ಪ್ರಕಟನೆಯಲ್ಲಿ ವಿಳಂಬ ಮುಂತಾದವನ್ನೊಳಗೊಂಡಿರುತ್ತದೆ,

ಮೂರನೇ ವಿಚಾರಣೆ ಕುಖ್ಯಾತ ಮಂತ್ರಿಪಿಳ್ಳೆಯವರು ಮಾಡಿದ"ಪಂಜಾಬ್‌ಮಾದರಿ ಭಾಷಣ"ದ ಬಗ್ಗೆ 1983ರಲ್ಲಿ ಎಲ್ ಡಿ.ಎಫ್. ಸಲ್ಲಿಸಿದ 14 ಅಪಾದನೆಗಳ ಮನವಿ ಪತ್ರ ಈ ವಿಚಾರಣೆಗೆ ಆಧಾರ. ಕರುಣಾಕರನ್‌ರವರು ಆಗ ವಿಚಾರಣಾ ಆಯೋಗ ನೇಮಕ ಮಾಡಲು ನಿರಾಕರಿಸಿ ನಿವೃತ್ತ ನ್ಯಾಯದೀಶೆಯವರಾದ ಜಾನಕಿ ಅಮ್ಮರವರಿಗೆ ಪರಿಶೀಲನೆಗೆ ಒಪ್ಪಿಸಿದ್ದರು.

ಈ ಎಲ್ಲಾ ಮೂರು ಹಗರಣಗಳಲ್ಲೂ ಮಾಜಿ ಮುಖ್ಯಮಂತ್ರಿ ಕರುಣಾಕರನ್ ಮುಖ್ಯಪಾತ್ರವಹಿಸಿ ಆಮೂರು ಮಂದಿ ಮಂತ್ರಿಗಳಿಗೂ ಒಳ್ಳೆಯವರೆಂಬ ಪದವಿ ನೀಡಿದಲ್ಲದೆ ಆಪಾದನೆಗಳಿಂದ ಪಾರು ಮಾಡಿದ್ದರು.

ಎಡ ಪ್ರಜಾಸತ್ತಾತ್ಮಕ ಸರ್ಕಾರ ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರವನ್ನು ತೊಡೆಯಲು ಬದ್ಧ ಕಂಕಣವಾಗಿದೆ. ಹಿಂದಿನ ಭ್ರಷ್ಟಾಚಾರ ಪ್ರಕರಣಗಳ ಬಗ್ಗೆ ತನಿಖೆ ಮಾತ್ರವೇ ಅಲ್ಲದೆ ಮುಂದೆ ಕೂಡ ಭ್ರಷ್ಟಾಚಾರ ನಡೆಯದು ಭ್ರಷ್ಟಾಚಾರ ನಿಷೇಧಕಾನೂನೊಂದನ್ನು ಜ್ಯಾರಿಗೆ ತರುತ್ತೇವೆಂದು ಮುಖ್ಯಮಂತ್ರಿ ನಾಯನಾರ್ ಘೋಷಿಸಿದ್ದಾರೆ.

ಎಸ್.ಎಫ್.ಐ.ಗೆ ಪ್ರಚಂಡ ವಿಜಯ

ಪ.ಬಂಗಾಳ ರಾಜ್ಯದಲ್ಲಿ 1986-87 ಶೈಕ್ಷಣಿಕ ವರ್ಷದಲ್ಲಿ ಏಳು ವಿಶ್ವವಿದ್ಯಾನಿಲಯಗಳು, 154 ಕಾಲೇಜುಗಳು ವಿದ್ಯಾರ್ಥಿ ಸಂಘಗಳ ಚುನಾವಣೆಯಲ್ಲಿ ಎಸ್. ಎಫ್.ಐ. ಪ್ರಚಂಡ ವಿಜಯ ಸಾಧಿಸಿ ವಿಜಯದ ತುತ್ತೂರಿಯನ್ನು ಮೊಳಗಿಸಿದೆ. ಹಿಂದೆ ಛಾತ್ರ ಪರಿಷತ್(ಕಾಂಗ್ರೆ ವಿದ್ಯಾರ್ಥಿ ಸಂಘಟನೆ)ಗೆದ್ದು ಕೊಂಡಿದ್ದ 43ಕಾಲೇಜುಗಳ ಯೂನಿಯನ್‌ಗಳನ್ನು ಸಹ ಎಸ್.ಎಫ್.ಐ. ಗೆದ್ದು ಕೊಂಡಿದೆ ಎಂದು ಪ.ಬಂಗಾಳದ ಕಾರ್ಯದರ್ಶಿಯವರಾದ ಶ್ರೀ ಗೌತಮದೇವ್ ಹೇಳಿದ್ದಾರೆ. ವಿದ್ಯಾರ್ಥಿಗಳಿಗಾಗಿ ಎಸ್.ಎಫ್.ಐ. ಮಾಡಿದ ಹೋರಾಟಗಳ ಫಲವಾಗಿಯೇ ಇಷ್ಟೊಂದು ಜಯಗಳಿಸಲು ಸಾಧ್ಯವಾಯಿತೆಂದು ತಿಳಿಸಿದ್ದಾರೆ.

ಪ್ರತ್ಯೇಕತಾವಾದಿಗಳ ವಿರುದ್ಧ

ಪಂಜಾಬಿನಲ್ಲಿ ಮಹಿಳೆಯರ ರ್‍ಯಾಲಿ

ಪಂಜಾಬಿನ ಭಯೋತ್ಪಾದಕ, ಜಾತಿವಾದಿಗಳ ವಿರುದ್ಧ ಹಾಗೂ ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆ ಬಗ್ಗೆ ವಿವಿಧ ಮಹಿಳಾ ಸಂಘಟನೆಗಳು ಜಂಟಿಯಾಗಿ ಜಲಂಧರ್ ದೇಶ ಭಗತ್ ಸ್ಮಾರಕ ಭವನದಲ್ಲಿ ಮೇ 24ರಂದು ಸಮಾವೇಶವನ್ನು ಏರ್ಪಡಿಸಿದ್ದರು. ಈ ಸಮಾವೇಶದಲ್ಲಿ ರಾಜ್ಯದ ವಿವಿಧ ಕಡೆಗಳಿಂದ 1,200ಕ್ಕೂ ಹೆಚ್ಚು ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು. ಬೃಹತ್ ಪ್ರಮಾಣದ ಮೆರವಣಿಗೆಯನ್ನು ಸಹ ಮಾಡಲಾಯಿತು.

ಈ ಸಮಾವೇಶದಲ್ಲಿ ಪಂಜಾಬ್ ಜನವಾದಿ ಮಹಿಳಾ ಸಂಘಟನೆಯ, ಪ್ರಧಾನ ಕಾರ್ಯದರ್ಶಿ ರಂಜಿಧರ್ ಕೌರ್ ಚಾಂಪಾ, ಪಂಜಾಬ್ ಮಹಿಳಾ ಸಂಘಟನೆಯ ಅಧ್ಯಕ್ಷರಾದ ಅಸಿಮಾ ರಿಬಿ, ಕಾಂಗ್ರೆಸ್ (ಐ) ನ ಗುರುಬ್ ಸಿಂಧರ್ ಕೌರ್ ಬ್ರಾರ್, ರೈತ ಸಂಘದ ಚಾಂಪಾ ಮಂಗಲ್‌ರಾವ್ ಮತ್ತು ಸ್ವರೂಪ್ ಕೌರ್ ಭಾಗವಹಿಸಿದ್ದರು.

ಈ ಸಮಾವೇಶವು ಕೆಲವು ಮುಖ್ಯ ವಾದನಿರ್ಣಯಗಳನ್ನು ಅಂಗೀಕರಿಸಿತು. ಪಂಜಾಬಿನಲ್ಲಿ ಮುಗ್ಧ ಜನರನ್ನು ಮಕ್ಕಳನ್ನು ಸಹ ಬಿಡದೆ ಕೊಲ್ಲುತ್ತಿರುವುದು ಮುಂದುವರಿಯುತ್ತಿದೆ. ರಾಜೀವ್ ಮತ್ತು ಲೋಂಗೋವಾಲ್ ಒಪ್ಪಂದವನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿತು. ಸರ್ಕಾರ ಈ ಕೃತ್ಯವನ್ನು ತಡೆಯಬೇಕೆಂದು ಈ ಭಯೋತ್ಪಾದಕ ಕೃತ್ಯದಲ್ಲಿ ಮಡಿದವರಿಗೆ ಸರ್ಕಾರ ಪರಿಹಾರ ನೀಡಬೇಕೆಂದು. ಈ ಅನಾಹುತದಲ್ಲಿ ಗಂಡನನ್ನು ಕಳೆದುಕೊಂಡ ವಿಧವೆಯರಿಗೆ ವಿದ್ಯಾರ್ಹತೆ ಆಧಾರದಲ್ಲಿ ಕೆಲಸ ಮತ್ತು ಭದ್ರತೆ ಒದಗಿಸಬೇಕೆಂದು, ಸಾಮ್ರಾಜ್ಯವಾದಿಗಳಿಗೂ, - ಭಯೋತ್ಪಾದಕರಿಗೂ, ಹಾಗೂ ಜಾತಿವಾದಿಗಳಿಗೂ ಇರುವ ಸಂಬಂಧವನ್ನು ಸರ್ಕಾರ ಬಹಿರಂಗಗೊಳಿಸಿ ಅವರ ಚಟುವಟಿಕೆಗಳನ್ನು ನಿಗ್ರಹಿಸಬೇಕೆಂದು ಒತ್ತಾಯ ಪಡಿಸಿತು. ಈ ಸಮಸ್ಯೆ ಬಗೆಹರಿಯಬೇಕಾದರೆ ರಾಜಕೀಯ ಹಾಗೂ ಆಡಳಿತಾತ್ಮಕ ಕ್ರಮಗಳೆರಡೂ ಬೇಕೆಂದು ಅಭಿಪ್ರಾಯ ಪಟ್ಟಿತು. ಮಹಿಳೆಯರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ರಾಜಕೀಯವಾಗಿ ಹಲವು ಸಮಸ್ಯೆಗಳಿದ್ದಾಗ್ಯೂ ರಾಷ್ಟ್ರ ವಿರೋಧಿ. ಜಾತಿವಾದಿ ಶಕ್ತಿಗಳ ವಿರುದ್ಧ ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆ ರಕ್ಷಿಸುವಂತೆ, ಹಾಗೂ ಸಾಮ್ರಾಜ್ಯಶಾಹಿಗಳ ಕೃತ್ಯಗಳನ್ನು ಸೋಲಿಸುವಲ್ಲಿ ನೆರವಾಗಬೇಕೆಂದು ಸಮಾವೇಶ ಕರೆಕೊಟ್ಟಿತು.

ಈ ಸಮಾವೇಶವನ್ನು ಉದ್ದೇಶಿಸಿ ರಂಜಿದರ್ ಕೌರ್ ಚಾಂಪಾ, ಮತ್ತು ಸಿ.ಪಿ.ಐ. (ಎಂ)ನ ಹುತಾತ್ಮ ಸಂಗಾತಿ ಕಾಂ॥ ದೀಪಕ್ ಧವನ್ ಸಹೋದರಿ ಇಂದೂ ಧವನ್ ಮಾತನಾಡಿದರು.

REG No. BGW-148, MAG (2) PRB DECR 319/78-79

ನಿಷ್ಕ್ರಿಯಗೊಳಿಸುವ ಪ್ರಯತ್ನ

(1ನೇ ಪುಟದಿಂದ)

ಈ ಎರಡೂ ರಾಜ್ಯಗಳಲ್ಲೂ ಕಾಂಗ್ರೆಸ್(ಐ)ವಿಧಾನ ಸಭೆಯಲ್ಲಿ ನಡೆಸುತ್ತಿರುವ ಅಡ್ಡಗಾಲಿಡುವ ತಂತ್ರಗಳು ಮಾರ್ಚ್ ಚುನಾವಣೆಯ ಜನರ ತೀರ್ಪನ್ನು ನಿಷ್ಪ್ರಯೋಜಕಗೊಳಿಸಲು ನಡೆಸುತ್ತಿರುವ ವಿಫಲ ಪ್ರಯತ್ನವೆಂಬುದು ಸ್ಪಷ್ಟ. ಇದಲ್ಲದೆ ರಾಜೀವ್ ಗಾಂಧಿ ಮತ್ತು ಸರ್ಕಾರದ ವಿರುದ್ಧ ಭ್ರಷ್ಟಾಚಾರ ಆಪಾದನೆಯ ಹಿನ್ನೆಲೆಯಲ್ಲಿ, ಅದನ್ನು ಮರೆ ಮಾಚಲು ಈ ರಾಜ್ಯ ಸರ್ಕಾರಗಳ ಮೇಲೆ ಸುಳ್ಳು ಭ್ರಷ್ಟಾಚಾರದ ಆಪಾದನೆಗಳನ್ನು ಹಾಕಿ, ಅದು ವಿಫಲವಾದಾಗಿನ ಹತಾಶೆ ಸಹ ಈ ವರ್ತನೆಗೆ ಇನ್ನೊಂದು ಕಾರಣ.

ಕಾಂಗ್ರೆಸ್(ಐ) ಪ್ರಜಾಸತ್ತಾತ್ಮಕ ಮತ್ತು ಪಾರ್ಲಿಮೆಂಟರಿ ರಿವಾಜುಗಳನ್ನು ಉಲ್ಲಂಘಿಸುತ್ತಿರುವುದು ವಿರೋಧ ಪಕ್ಷ ಆಡಳಿತದಲ್ಲಿರುವ ರಾಜ್ಯಗಳಲ್ಲಿ ಮಾತ್ರವಲ್ಲ, ಕಾಗ್ರೆಸ್(ಐ) ಆಡಳಿತದ ರಾಜ್ಯಗಳಲ್ಲೂ ಸುಗ್ರೀವಾಜ್ಞೆಗಳಿಂದ ಆಳುತ್ತಾ, ವಿಧಾನ ಸಭೆಯ ಹಕ್ಕು ಮತ್ತು ಅಧಿಕಾರವನ್ನು ಮೊಟಕುಗೊಳಿಸಿ ಅಲಕ್ಷಿಸುತ್ತಿರುವುದು ಸರ್ವೇಸಾಮಾನ್ಯ. ಕಾಂಗ್ರೆಸ್(ಐ) ಆಡಳಿತದ ರಾಜ್ಯಗಳಲ್ಲಿ ಅಧಿವೇಶನದ ಅವಧಿ ಕ್ರಮೇಣ ಕಡಿಮೆಯಾಗುತ್ತಿದೆ. ಹೀಗಿರುವಾಗ ಅಧಿಕಾರ ಕಳೆದುಕೊಂಡು ಹತಾಶ ಸ್ಥಿತಿಯಲ್ಲಿರುವ ಇವರಿಂದ ಒಳ್ಳೆಯ ವರ್ತನೆ ಅಪೇಕ್ಷಿಸುವುದು ಸಾಧ್ಯವೇ ?

ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ,ರಿವಾಜುಗಳ ಬಗ್ಗೆ ಅಲಕ್ಷ್ಯ, ಕಾಂಗ್ರೆಸ್(ಐ)ನ ಸರ್ವಾಧಿಕಾರಿ ವರ್ತನೆಯ ಭಾಗ, ಕೋಮು ಪರಿಸ್ಥಿತಿ ಮತ್ತು ಕಾನೂನು ವ್ಯವಸ್ಥೆಯ ಬಿಗಡಾಯಿಸುವಿಕೆ, ಪೋಲೀಸು ಮತ್ತು ಅಧಿಕಾರಶಾಹಿಗೆ ಮಿತಿಮೀರಿದ ಅಧಿಕಾರ, ಜನತೆಯ ಅಧಿಕಾರ ಮೊಟಕುಗೊಳಿಸುವಿಕೆ ಅಧಿಕಾರಶಾಹಿ ವರ್ತನೆಯ ಇತರ ಲಕ್ಷಣಗಳು.

ಈ ಹಿನ್ನೆಲೆಯಲ್ಲಿ ಈ ಎರಡು ರಾಜ್ಯಗಳಲ್ಲಿ ಕಾಂಗ್ರೆಸ್(ಐ)ನ ವರ್ತನೆಯನ್ನು ಎಲ್ಲಾ ಪ್ರಜಾಪ್ರಭುತ್ವವಾದಿಗಳು ಖಂಡಿಸಬೇಕು. ಕಾಂಗ್ರೆಸ್(ಐ) ವರ್ತನೆ ಸುಧಾರಿಸುವಂತೆ ಒತ್ತಡ ತರುವುದೂ ಅತ್ಯಗತ್ಯ.

ಅರಮನೆ ಪಿತೂರಿಗಳ ಮೂಲಕವಲ್ಲ

(1ನೇ ಪುಟದಿಂದ)

ವಿರೋಧ ಪಕ್ಷಗಳ ನಿಲುವು ಮೂರನೆಯದು ಸಂವಿಧಾನದಲ್ಲಿ ತನಗಿರುವ ಅಧಿಕಾರಕ್ಕೆ ಸ್ವಲ್ಪವೂ ಮಿತಿಯನ್ನು ಹಾಕಿಕೊಳ್ಳದಿರುವ ಆದರೆ ಅದೇ ಸಮಯದಲ್ಲಿ ತನಗಿರುವ ಅಧಿಕಾರವನ್ನು ಮೀರಿ ವರ್ತಿಸದಿರುವ ರಾಷ್ಟ್ರಪತಿ ಬೇಕು ಎಂಬ ಎಡ ಪಕ್ಷಗಳ ನಿಲುವು.

ಕೆಲವು ಪತ್ರಿಕೆಗಳ ಈ ಆರೋಪಗಳಿಗೆ ಉತ್ತರಿಸಿದ ಸಿ. ಪಿ. ಐ. (ಎಂ) ಪಾಲಿಟ್‌ಬ್ಯೂರೊ ಸದಸ್ಯರಾದ ಕಾ|| ಬಿ.ಟಿ. ರಣದಿವೆಯವರು.

"ಜೇಲ್‌ಸಿಂಗರು ಸ್ಪರ್ಧಿಸಿದರೆ ಗೆಲ್ಲುವರು ಎಂಬ ಪ್ರತಿ ಪಕ್ಷಗಳ ಭಾವನೆ ಹಾಸ್ಯಾಸ್ಪದ. ಪ್ರತಿ ಪಕ್ಷಗಳು ತಮ್ಮದೇ ಅಭ್ಯರ್ಥಿಯನ್ನು ನಿಲ್ಲಿಸಬೇಕೇ ಹೊರತು ಕಾಂಗ್ರೆಸ್ಸಿಗರನ್ನಲ್ಲ.ರಾಜೀವ್‌ಗಾಂಧಿ ಸರ್ಕಾರವನ್ನು ಎದುರಿಸುವುದು ಅರಮನೆ ಪಿತೂರಿಗಳ ಮೂಲಕವಲ್ಲ. ಜನರ ಬಳಿಗೆ ಹೋಗುವುದರ ಮೂಲಕ" ಎಂದಿದ್ದಾರೆ. ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರವಾಗಿ "200 ಕಾಂಗ್ರೆ ಎಂ.ಪಿ.ಗಳು ಜೇಲ್‌ಸಿಂಗರಿಗೆ ತಿಳಿಸಿದರು ಎಂಬ ವರದಿಗಳಿವೆ. ಆದರೆ ನಾಮಕರಣ ಪತ್ರಕ್ಕೆ ಅನುಮೋದನೆ ಮಾಡಿ ಖಚಿತ ಪುರಾವೆಯನ್ನು ಒದಗಿಸಿ ಎಂದಾಗ ಕೇವಲ 20ಜನರ ಸಹಿಯನ್ನು ಒದಗಿಸಲು ಮಾತ್ರ ವಿ. ಸಿ. ಶುಕ್ಲ ಶಕ್ತರಾದರು" ಎಂದರು.

[ಇದರ ಜೊತೆ ಪ್ರಕಟವಾಗಿರುವ ಮೂರು ಸದಸ್ಯರ ಸಮಿತಿಯಲ್ಲಿನ ನಡವಳಿಕೆ ಬಗ್ಗೆ ಕಾ|| ಇ. ಎಂ. ಎಸ್.ರವರ ಪತ್ರದ ಪೂರ್ಣ ಪಾಠ ನೋಡಿ.] ○

ಇ. ಎಂ. ಎಸ್. ಪತ್ರ

(1ನೇ ಪುಟದಿಂದ)

ವಿಸ್ತೃತ ಸಭೆಯಲ್ಲಿ (ವಿರೋಧಿ ಪಕ್ಷಗಳ ಸಂಸತ್ ಹಾಗೂ ಶಾಸಕಾಂಗ ನಾಯಕರ ಸಭೆಯಲ್ಲಿ) ಹೆಸರನ್ನು ಸೂಚಿಸಿದರೆ ಚರ್ಚೆಗೆ ಆತಂಕವಾಗುತ್ತದೆಂದು ಈ ಮೇಲಿನ ಶಿಫಾರಸನ್ನು ಹೊರತುಪಡಿಸಿ ವರದಿಯನ್ನು ಓದಲಾಯಿತು. ವಾಸ್ತವವಾಗಿ ಹೇಳುವುದಾದರೆ ನೀವು ಚರ್ಚೆಯ ನಂತರವೂ ನಮ್ಮ ಸಮಿತಿ ಶ್ರೀ ಕೃಷ್ಣ ಐಯ್ಯರ್ ರವರನ್ನು ಆರಿಸಿದೆ ಎಂದು ವರದಿ ಮಾಡಲಿಲ್ಲ.

ವಿರೋಧ ಪಕ್ಷಗಳ ಅಭ್ಯರ್ಥಿಯಾಗಿ ನಿಲ್ಲಲು ನಾವು ಒಪ್ಪಿಸಿದ ಶ್ರೀ ಕೃಷ್ಣ ಅಯ್ಯರ್ ರವರನ್ನು ಅನಿಶ್ಚಿತಸ್ಥಿತಿಯಲ್ಲಿ ಅಂತಕದಲ್ಲಿಟ್ಟು' ವಿರೋಧ ಪಕ್ಷಗಳ ಕೆಲವು ನಾಯಕರು "ಕಾಂಗ್ರೆಸ್ ನಲ್ಲಿ ಒಡಕನ್ನುಂಟು ಮಾಡಬಹುದಾದ ಸ್ಪರ್ಧೆ" ಯೆಂಬ ಮಾಯ ಜಿಂಕೆಯ ಬೇಟೆಯಾಡಲು ಹೊರಟಿದ್ದು ನನಗೆ ಖೇದವನ್ನುಂಟು ಮಾಡಿದೆ. ಇದು ನನ್ನ ದೃಷ್ಟಿಯಲ್ಲಿ ತತ್ವಗಳ ಆಧಾರದ ಮೇಲೆ ಹೋರಾಟ ಮಾಡುವವರನ್ನು ಬೆಂಬಲಿಸಲು ಸಿದ್ಧವಿರುವ ಕಾಂಗ್ರೆಸ್ಸಿಗರೂ ಬೆಂಬಲಿಸಬಹುದಾದ ಸರ್ವಮಾನ್ಯ ಅಭ್ಯರ್ಥಿಯ ಆಯ್ಕೆಯನ್ನು ಒಳಗೊಳಗೇ ಮುರಿದು ಹಾಕುವ ಪ್ರಯತ್ನಕ್ಕೆ ಸರಿಸಮಾದದ್ದು.

ಉತ್ಕೃಷ್ಟ ವಿರೋಧಿ ಅಭ್ಯರ್ಥಿಯನ್ನು ಸ್ಪರ್ಧಿಯಾಗಲು ಒಲಿಸಿದ ನಮಗೂ ಹಾಗೂ ಸ್ವತಃ ಸ್ಪರ್ಧಿಗೂ ಇದು ಸರಿಯಾದುದಲ್ಲವೆಂದು ಈ ದಿನ ಬೆಳಗ್ಗೆ ಸಮಿತಿಯ ಸಭೆಯಲ್ಲಿ ಸ್ಪಷ್ಟಪಡಿಸಿದ್ದೇನೆ. ಆದುದರಿಂದ ನಾನು ಮೂರುಜನರ ಸಮಿತಿಯ ಸದಸ್ಯನಾಗಿ ಮುಂದುವರೆಯಲು ಸಾಧ್ಯವಿಲ್ಲವೆಂದು ತಿಳಿಸಲು ವಿಷಾದಿಸುತ್ತೇನೆ. ನನ್ನ ಪಕ್ಷದ ಶಾಸಕಾಂಗ ನಾಯಕರುಗಳ ನಾಳೆಯ ಸಭೆಯಲ್ಲಿ ಭಾಗವಹಿಸುವುದಿಲ್ಲ. ನಾವು ಕಾಂಗ್ರೆಸ್ ಪ್ರತಿಸ್ಪರ್ಧಿಯೊಬ್ಬರನ್ನು ನಿಲ್ಲಿಸುವ ನಮ್ಮ ಕೆಲಸವನ್ನು ಮುಂದುವರೆಸುತ್ತೇವೆ.

ವಂದನೆಗಳೊಂದಿಗೆ ನಿಮ್ಮ ವಿಶ್ವಾಸಿ

ಇ. ಎಂ. ಎಸ್. ನಂಬೂದರಿಪಾದ್

ಬಿಜಾಪುರದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿ

ಕುಡಿಯುವ ನೀರು ಕೇಳಿದರೆ ಹೆಂಗಸರು ಮಕ್ಕಳ ಮೇಲೆ ಲಾಠಿಚಾರ್ಜು ಮಾಡುತ್ತಿರುವುದು ಅತ್ಯಂತ ಖಂಡನೀಯ. ನಗರ ಸಭೆಯವರು ಆ ದಿವಸ ನಲ್ಲಿ ಯಲ್ಲಿ ನೀರು ಬಿಡದಿದ್ದಾಗ ರೊಚ್ಚಿಗೆದ್ದ ಜನ ಬಿಜಾಪುರದಲ್ಲಿ ತಾ.20ರಂದು ರಸ್ತೆಗಳಲ್ಲೆಲ್ಲ ಕಲ್ಲು ಖಾಲಿಕೊಡಗಳನ್ನಿಟ್ಟು ಸಂಚಾರ ಬಂದ್ ಮಾಡಿ ತಮ್ಮ ಪ್ರತಿಭಟನೆ ವ್ಯಕ್ತಮಾಡಿದಾಗ, ಎಸ್. ಟಿ. ಬಸ್ಸುಗಳೆಲ್ಲಾ ಚಲಿಸದೆ ನಿಂತಾಗ ಸಂಜೆ ನಾಲ್ಕುಗಂಟೆಗೆ ಪೋಲೀಸರು ಲಾಠಿಚಾರ್ಜು ಮಾಡಿದ ಸಂಗತಿ ಸರ್ಕಾರಕ್ಕೆ ತಿಳಿದಂತೆ ಕಾಣುವುದಿಲ್ಲ. ಹೋದ ವರ್ಷ ಡಿಸೆಂಬರ್ ತಿಂಗಳಿಂದಲೂ ಸಿ.ಪಿ.ಐ.(ಎಂ), ರೈತ ಸಂಘ ಹಾಗೆಯೇ ನಗರ ಸಭೆ ಸದಸ್ಯರು ಹಲವಾರು ಸಲ ಅನ್ನ ಸತ್ಯಾಗ್ರಹ, ಮತ ಪ್ರದರ್ಶನಗಳನ್ನು ನಡೆಸಿದರೂ ಕೂಡ ಮಾಡುತ್ತೇವೆಂಬ ಒಣ ಆಶ್ವಾಸನೆ ಮಂತ್ರಿಗಳಿಂದ ಬಂತಲ್ಲದೆ ನೀರು ಪೂರೈಕೆ ಆಗಲಿಲ್ಲ.ಬಿಜಾಪುರದ ಜನತೆ ರೊಚ್ಚಿಗೇಳಲಿಕ್ಕೆ, ನೀರಿಗಾಗಿ ಕಷ್ಟಪಡಲಿಕ್ಕೆ ಜನತಾ ಸರ್ಕಾರದ ಅದಕ್ಷ ಆಡಳಿತೆಯೇ ಕಾರಣವೆಂದು, ಸಿ.ಪಿ.ಐ.(ಎಂ) ಮುಖಂಡರಾದ ಎನ್.ಕೆ. ಉಪಾಧ್ಯಾಯರು ತಾ.22ರಂದು ನಗರಾಡಳಿತ ಮಂತ್ರಿ ಚಂದ್ರಶೇಖರ ಅವರು ಬಿಜಾಪುರದ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕರೆದ ಸಭೆಯಲ್ಲಿ ಆರೋಪಿಸಿದರು. ಈ ಸಭೆಯಲ್ಲಿ ಜಿಲ್ಲೆಯ ಮಂತ್ರಿಗಳಾದ ಜಿಗಜಣಗಿ ಹಾಗೂ ಬಾಗಲಕೋಟ್ ಶಿವರು ಉಪಸ್ಥಿತರಿದ್ದರು.

ಈ ವರ್ಷ ಕರ್ನಾಟಕ ರಾಜ್ಯದ 7000ಕ್ಕೂ ಹೆಚ್ಚು ಹಳ್ಳಿಗಳೂ 150 ಕ್ಕಿಂತಲೂ ಹೆಚ್ಚು ನಗರಗಳೂ ಕುಡಿಯುವ ನೀರಿಲ್ಲದೆ ತೊಂದರೆಗೊಳಗಾಗಿವೆ.ಸರ್ಕಾರಿ ಹೇಳಿಕೆ ಪ್ರಕಾರ 1972 ರಿಂದೀಚೆಗೆ ನಮ್ಮ ರಾಜ್ಯದಲ್ಲಿ 1ಲಕ್ಷದ 16ಸಾವಿರದಷ್ಟು ಬೋರ್‌ವೆಲ್ ತೆಗೆಯಲಾಗಿದೆ. ಅದರಲ್ಲಿ ಕೆಲವು ವಿಫಲಗೊಂಡು ಇನ್ನೂ ಕೆಲವುಗಳಲ್ಲಿ ನೀರು ಬತ್ತಿಹೋಗಿವೆ. ಉತ್ತರಕರ್ನಾಟಕದಲ್ಲಿ ಉಗಮವಾದ ಹಲವಾರು ನದಿಗಳು ಪಶ್ಚಿಮಕ್ಕೂ ಪೂರ್ವಕ್ಕೂ ಹರಿಯುತ್ತಿವೆ. ಮಳೆಗಾಲದಲ್ಲಿ ನೆರೆನೀರು ಆ ನದಿಗಳಲ್ಲಿ ತುಂಬಿ ಹರಿದು ನದಿ ತೀರದ ಪ್ರದೇಶಗಳಲ್ಲಿ ಹಾನಿ ಉಂಟು ಮಾಡುತ್ತಿವೆ. ನೀರಾವರಿ ಮತ್ತು ವಿದ್ಯುಚ್ಛಕ್ತಿಗಾಗಿ ದೊಡ್ಡ ಯೋಜನೆಗಳನ್ನು ಕೈಗೊಳ್ಳುತ್ತಿರುವಾಗಲೇ,ನದಿಗಳಲ್ಲಿ ತುಂಬಿ ಹರಿಯುತ್ತಿರುವ ನೆರೆ ನೀರನ್ನು ಆದಷ್ಟು ಹೆಚ್ಚು ಸಂಗ್ರಹಿಸಿಡುವಂತೆ ಮಾಡಲು, ಆ ನೀರು ಕೆರೆಗಳಿಗೆ ಹರಿಯುವಂತೆ ಪರಿಪೂರ್ಣ ಒಂದು ಯೋಜನೆಯನ್ನು ಸರ್ಕಾರ ತಯಾರಿಸಬೇಕೆಂದು ಸೂಚಿಸಿದರು.

ಭೀಮಾ,ಕೃಷ್ಣಾ, ಘಟಪ್ರಭಾ,ಮಲಪ್ರಭಾ,ತುಂಗಭದ್ರಾ ಮೊದಲಾದ ನದಿಗಳಲ್ಲಿ ಹರಿಯುತ್ತಿರುವ ನೆರೆ ನೀರಿನ ಹೆಚ್ಚಿನಂಶವನ್ನು ಸಂಗ್ರಹಿಸಲು ಸಾಧ್ಯವಾದರೆ ರಾಜ್ಯದ ಅರ್ಧಕ್ಕಿಂತಲೂ ಹೆಚ್ಚಿನ ಪ್ರದೇಶ ಕುಡಿಯುವ ನೀರಿಗೂ ಗತಿಯಿಲ್ಲದೆ ತಡಪಡಿಸುವ ಪರಿಸ್ಥಿತಿ ನಿವಾರಿಸಬಹುದೆಂದು ಹೇಳಿದರು.

ಕಾ|| ಕೆ.ಆರ್. ಶ್ರೀಯಾನ್ ಸೋವಿಯತ್ ರಷ್ಯಾಕ್ಕೆ

ಸಿ.ಪಿ.ಐ (ಎಂ) ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರೂ ದ.ಕ.ಜಿಲ್ಲಾ ಸಮಿತಿ ಸದಸ್ಯರು ಆದ ಕಾ.ಕೆ ಆರ್ ಶ್ರೀಯಾನ್ ಅವರು ಸೋವಿಯತ್ ದೇಶಕ್ಕೆ ದಿ. 27 ರಂದು ತೆರಳುವರು.

ಈ ವಾರ....

★ ಫಿಲಿಪೈನ್ಸ್‌ನಲ್ಲಿರುವ ಕಮ್ಯುನಿಸ್ಟ್‌ವಿರೋಧಿ "ವಿಜಿಲೆಂಟ್" ಎಂಬ ಗುಂಪುಗಳಿಗೆ ಸಿ.ಐ.ಎ. ಹಣ ಮತ್ತು ಶಸ್ತ್ರ ಒದಗಿಸುತ್ತದೆಯೆಂದೂ, ಆದರಿಂದಾಗಿ ಅಂತಹ ಗುಂಪುಗಳನ್ನು ರದ್ದುಗೊಳಿಸಬೇಕೆಂದೂ ಅಮೇರಿಕಾದ ಒಂದು ಖಾಸಗೀ ತನಿಖಾ ತಂಡ ಒತ್ತಾಯಿಸಿದೆ. ಈ ಗುಂಪುಗಳನ್ನು ಬೆಳೆಯ ಬಿಟ್ಟರೆ ಮಾರ್ಕೋಸ್ ಕಾಲದಲ್ಲಿ ಕಂಡು ಬಂದುದಕ್ಕಿಂತಲೂ ಭಯಾನಕವಾದ ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ಕಾಣಬೇಕಾದೀತು ಎಂದು ಆ ತಂಡ ಆತಂಕವ್ಯಕ್ತಪಡಿಸಿದೆ.

—ರ್‍ಯಾಟರ್ ಸುದ್ದಿ, ಜೂನ್20.

★ ಜಪಾನ್ ಭವಿಷ್ಯದಲ್ಲಿ ತನ್ನದೇ ಆದ ಯುದ್ಧ ವಿಮಾನಗಳನ್ನು ತಯಾರಿಸುವ ಯೋಜನೆ ಹಾಕಿಕೊಂಡಿರುವುದರ ವಿರುದ್ಧ ಅಮೇರಿಕಾದ ಪೆಂಟಗನ್ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ. ಜಪಾನಿನ ಸಂವಿಧಾನ ಇದಕ್ಕೆ ಅವಕಾಶ ಕೊಡುವುದಿಲ್ಲವಾದ್ದರಿಂದ ಜಪಾನು ತನ್ನ ಎಲ್ಲಾ ರಕ್ಷಣಾ ಸಾಮಗ್ರಿಗಳಿಗೆ ಅಮೇರಿಕಾವನ್ನು ಅವಲಂಬಿಸಬೇಕೆಂದು ಅವರು ಒತ್ತಾಯಿಸಿದ್ದಾರೆ. ಅತ್ತ ಭವಿಷ್ಯದಲ್ಲಿ ಅಮೇರಿಕಾ ಮತ್ತು ಯುರೋಪ್ ಒಂದೇ ರೀತಿಯ ಯುದ್ಧ ವಿಮಾನ ತಯಾರಿಸಬೇಕೆಂಬ ಅಮೇರಿಕಾದ ಒತ್ತಾಯವನ್ನು ಫ್ರಾನ್ಸ್ ಸರ್ಕಾರ ತಿರಸ್ಕರಿಸಿದೆ.

—ಪಿ.ಟಿ.ಐ. ಸುದ್ದಿ, ಜೂನ್22.

★ ಅಮೇರಿಕನ್ ಶಾಸಕಾಂಗದ ದಾಖಲೆಗಳ ಪ್ರಕಾರ 23% ಸೆನೇಟರುಗಳು ಕೋಟ್ಯಾಧೀಶರು. ಕಳೆದ ವರ್ಷ ಒಂದು ಸೆನೆಟ್ ಸ್ಥಾನ ಗೆಲ್ಲಲು ಸರಾಸರಿ ಖರ್ಚು ಸುಮಾರು 4ಕೋಟಿರೂ.ಗಳು ಹಾಗೂ ಪ್ರತಿನಿಧಿ ಸಭೆಯ ಸದಸ್ಯತ್ವ ಗೆಲ್ಲಲು 4ಲಕ್ಷ ರೂಪಾಯಿಗಳು.

—ಡಿ.ಪಿ.ಎ. ಸುದ್ದಿ, ಜೂನ್23.

★ ಅಮೇರಿಕನ್ ಸರ್ಕಾರದ ವಾಣಿಜ್ಯ ವಿಭಾಗ ಹೊರಡಿಸಿದ ಅಂಕಿ ಅಂಶಗಳ ಪ್ರಕಾರ ಅಮೇರಿಕಾದ ವಿದೇಶಿ ಸಾಲ ಕಳೆದ ವರ್ಷದ 111.9 ಶತಕೋಟಿ ಡಾಲರುಗಳಿಂದ 263.6 ಶತಕೋಟಿ ಡಾಲರುಗಳಿಗೇರಿವೆ. ಈಗ ಅದು ವಿಶ್ವದ ಅತ್ಯಂತ ದೊಡ್ಡ ಸಾಲಗಾರ ದೇಶ. ಎರಡನೇ ಸ್ಥಾನದಲ್ಲಿರುವ ಬ್ರೆಜಿಲ್ ದೇಶದ ಸಾಲ 108.8 ಶತಕೋಟಿ ಡಾಲರು.

ಪಿ.ಟಿ.ಐ. ಜೂನ್ 25.

★ ಸಿ.ಪಿ.ಎಂ. ನಾಯಕತ್ವದ ದೃಢ ನಿಲುವಿನಿಂದಾಗಿ ಈ (ರಾಷ್ಟ್ರಪತಿ ಸ್ಥಾನಕ್ಕೆ) ಸ್ಪರ್ಧೆ ಸಮಯ ಸಾಧಕ ಮಟ್ಟಕ್ಕೆ ಇಳಿಯದೆ ತಾತ್ವಿಕ ಮಟ್ಟಕ್ಕೆ ಎತ್ತರಿಸುವಂತಾದದು ಗಮನಾರ್ಹ.

ಪ್ರಜಾವಾಣಿ, ಜೂನ್ 24.

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor P. RamachandraRao
Managing Editor : N. K. Upadhyaya